# ಅಧ್ಯಾಯ ೧೦

## ನ್ಯಾಯಾಡಳಿತ

ಶಾಸನಗಳಿಂದ ತಿಳಿದುಬರುವಂತೆ ಕೋಲಾರ ಜಿಲ್ಲೆಯ ನ್ಯಾಯಾಡಳಿತವು ರಾಜ್ಯದ ಇತರೆ ಪ್ರದೇಶಗಳಂತೆಯೇ ನಡೆಯುತ್ತಿದ್ದಿತು. ನ್ಯಾಯ, ನೀತಿ, ಧರ್ಮ, ಆತ್ಮಗೌರವ, ಕುಟುಂಬ ಗೌರವಗಳು ಹಿಂದಿನ ಕಾಲದಲ್ಲಿ ಅತಿ ಹೆಚ್ಚಿನ ಸಾಮಾಜಿಕ ಮೌಲ್ಯಗಳಾಗಿದ್ದು, ಜನಸಾಮಾನ್ಯರು ಇವನ್ನೇ ನಂಬಿ ಜೀವಿಸುತ್ತಿದ್ದರು. ಅಗೋಚರವಾದ ದೈವಶಕ್ತಿಯಲ್ಲಿ ಮತ್ತು ಗೋಚರವಾದ ಆಳರಸರಲ್ಲಿ ಅಪಾರ ನಂಬಿಕೆ ಹೊಂದಿದ್ದ ಎಲ್ಲರೂ ನ್ಯಾಯಯುತವಾಗಿ ತಂತಮ್ಮ ಕೆಲಸಕಾರ್ಯಗಳಲ್ಲಿ ತೊಡಗಿದ್ದರು. ಅವರು ಸಾಮಾಜಿಕ ವ್ಯವಸ್ಥೆಗೆ ಧಕ್ಕೆ ತರುವ ಯಾವುದೇ ಕೆಲಸಗಳನ್ನು ಮಾಡುತ್ತಿರಲಿಲ್ಲ. ಹಾಗಾಗಿ ಆಗಿನ ಸಮಾಜದಲ್ಲಿ ಇಂದಿನಂತೆ ನ್ಯಾಯಬಾಹಿರ ಚಟುವಟಿಕೆಗಳು ಹೆಚ್ಚು ನಡೆಯುತ್ತಿರಲಿಲ್ಲ. ಆದರೂ ಮಾನವರ ಮನೋವ್ಯಾಪಾರಗಳಲ್ಲಿ ಸಮ್ಮಿಳಿತವಾದ ವಂಚನೆ, ಕಳ್ಳತನಗಳು ಇರಲಿಲ್ಲವೆಂದೂ ಹೇಳಲಾಗುವುದಿಲ್ಲ. ಇಂತಹ ಪ್ರಕರಣಗಳು ಹಲವು ಆಯಾಮಗಳನ್ನು ಪಡೆದಿದ್ದವು. ತಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ಉದ್ಭವಿಸುತ್ತಿದ್ದ ವ್ಯಾಜ್ಯಗಳನ್ನು ಜನರು ತಂತಮ್ಮಲ್ಲಿಯೇ ಇತ್ಯರ್ಥ ಮಾಡಿಕೊಳ್ಳುವುದು ವಾಡಿಕೆಯಾಗಿದ್ದಿತು. ವೈಯಕ್ತಿಕ ಮಟ್ಟದಲ್ಲಿ ತೀರ್ಮಾನವಾಗದ ವಿಷಯಗಳು ಹಳ್ಳಿಯ ಪಂಚಾಯ್ತಿಗೆ ಒಯ್ಯಲ್ಪಡುತ್ತಿದ್ದವು. ಇಲ್ಲಿಯೂ ವಿಫಲವಾದ ವ್ಯಾಜ್ಯಗಳು ಅಂತರ ಹಳ್ಳಿಗಳ ಅಥವಾ ಹೋಬಳಿ ಮಟ್ಟದಲ್ಲಿನ ಹಿರಿಯರ ಸಮ್ಮುಖದಲ್ಲಿ ಮಂಡಿಸಲ್ಪಡುತ್ತಿದ್ದವು. ಸಾಮಾನ್ಯವಾಗಿ ಈ ಹಂತದಲ್ಲಿ ಎಲ್ಲಾ ರೀತಿಯ ವ್ಯಾಜ್ಯಗಳು ತೀರ್ಮಾನಗೊಳ್ಳುತ್ತಿದ್ದು, ಇಲ್ಲಿಯೂ ಇತ್ಯರ್ಥವಾಗದವು ನ್ಯಾಯಾಧೀಶರನ್ನೊಳಗೊಂಡ ರಾಜನ ಆಸ್ಥಾನ ತಲುಪುತಿದ್ದವು. ಈ ಮಟ್ಟಮುಟ್ಟುವ ಪ್ರಕರಣಗಳು ಗಂಭೀರ ಸ್ವರೂಪದ್ದಾಗಿರುತ್ತಿದ್ದವು. ಆದರೆ ಹಳ್ಳಿಯ ಹಿರಿಯರು ತಮ್ಮ ಗ್ರಾಮಗಳ ತಗಾದೆಗಳನ್ನು ಈ ಮಟ್ಟ ತಲುಪಲು ಬಿಡದೆ ಪಂಚಾಯ್ತಿ ಮಟ್ಟದಲ್ಲಿಯೇ ಬಗೆಹರಿಸಿ ನ್ಯಾಯಪಾಲನೆಗೆ ಅನುವು ಮಾಡಿಕೊಡುತ್ತಿದ್ದರು. ತಮ್ಮ ಗ್ರಾಮದ ಮನಸ್ತಾಪಗಳು ಮೇಲ್ಮಟ್ಟಕ್ಕೆ ಹೋಗುವುದು ಹಳ್ಳಿಯ ಗೌರವಕ್ಕೆ ತಕ್ಕುದಲ್ಲವೆಂಬುದು ಸಾಮಾನ್ಯ ಅಭಿಪ್ರಾಯವೂ ಆಗಿದ್ದಿತು.

ಪಂಚಾಯ್ತಿ ಕಟ್ಟೆ ಗ್ರಾಮದ ಹಿರಿಯರ ಒಂದು ಗುಂಪಾಗಿದ್ದು, ಇದರಲ್ಲಿ ನ್ಯಾಯದಾನ ಮಾಡುವ ಮುಖಂಡರು ಸಮಾಜದ ವಿವಿಧ ಜಾತಿಗಳನ್ನು ಪ್ರತಿನಿಧಿಸುತ್ತಿದ್ದರು. ಇಂತಹ ನ್ಯಾಯ ನಿರ್ಣೇತರಾಗಲು ತಕ್ಕಮಟ್ಟಿನ ವಿದ್ಯೆ, ವೈಯಕ್ತಿಕ ವರ್ಚಸ್ಸು ಹಾಗೂ ಮಾತನಾಡುವ ಶೈಲಿಗಳು ಮುಖ್ಯವಾಗಿದ್ದವು. ಸಾಮಾನ್ಯವಾಗಿ ಈ ಸ್ಥಾನಗಳು ಅನುವಂಶೀಯವಾಗಿದ್ದವು.

ಪಂಚಾಯ್ತಿ ಕಟ್ಟೆಗೆ ಒಯ್ಯಲ್ಪಡುತ್ತಿದ್ದ ವಿಷಯಗಳಲ್ಲಿ ವೈವಿಧ್ಯತೆ ಇದ್ದು, ಆಸ್ತಿ ವಿವಾದಗಳಿಂದ ಹಿಡಿದು ವೈಯಕ್ತಿಕ ನಿಂದನೆಗಳವರೆಗೆ ಇದರ ವಿಸ್ತಾರವಿರುತ್ತಿತ್ತು. ಫಿರ್ಯಾದಿ ತನ್ನ ಅಹವಾಲನ್ನು ಹಳ್ಳಿಯ ಮುಖಂಡನಿಗೆ ತಿಳಿಸಿದಾಗ, ಆತ ಇತರ ಪ್ರಮುಖರೊಡನೆ ಸಮಾಲೋಚಿಸಿ, ಅವಶ್ಯವಿದ್ದಲ್ಲಿ ತೋಟಿಯ ಕೈಲಿ ಡಂಗುರ ಹೊಡೆಸಿ, ಪಂಚಾಯ್ತಿಯ ದಿನ ನಿರ್ಧಾರ

ಮಾಡುತ್ತಿದ್ದನು. ಸಾಮಾನ್ಯವಾಗಿ ಸಾರ್ವಜನಿಕ ಸ್ಥಳಗಳಾದ ಅರಳೀಕಟ್ಟೆ ದೇವಸ್ಥಾನ, ಅಯ್ಯನವರ ಚಾವಡಿಗಳಲ್ಲಿ ಪಂಚಾಯ್ತಿ ಸಭೆ ಸೇರುತ್ತಿತ್ತು. ಈ ಸಭೆ ಜನಾನುಕೂಲಕ್ಕಾಗಿ ಸಂಜೆಯ ತಂಪು ಹೊತ್ತಿನಲ್ಲಿ ಸೇರುತ್ತಿತ್ತು. ದೀಪದ ಬೆಳಕನ್ನೇ ಹಲವೆಡೆ ಸಾಕ್ಷಿಯಾಗಿ ಪರಿಗಣಿಸಲಾಗುತ್ತಿತ್ತು. ಪ್ರಶಸ್ತವಾದ ದಿನಗಳಂದು ಮಾತ್ರ ನ್ಯಾಯ ನಿರ್ಣಯ ನೀಡಲಾಗುತ್ತಿತ್ತು. ಅಮಾವಾಸ್ಯೆ, ಹುಣ್ಣಿಮೆ ಹಾಗೂ ಗ್ರಹಣದ ದಿನಗಳಂದು ಪಂಚಾಯ್ತಿ ಸೇರುತ್ತಿರಲಿಲ್ಲ.

ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಇತ್ಯರ್ಥವಾಗದ ವಿಷಯಗಳನ್ನು ಮೇಲ್–ಪಂಚಾಯ್ತಿಗೆ ಒಪ್ಪಿಸಲಾಗುತ್ತಿತ್ತು. ಇದು ಸುತ್ತಮುತ್ತಲ ಹಿರಿಯರನ್ನೊಳಗೊಂಡಿರುತ್ತಿತ್ತು. ಇದಕ್ಕಿಂತ ಉನ್ನತ ನ್ಯಾಯಸ್ಥಾನ ಕಟ್ಟೆಮನೆಯಾಗಿದ್ದಿತು. ಊರಿನ ಪ್ರಮುಖ ವ್ಯಕ್ತಿ ಇಲ್ಲಿ ನ್ಯಾಯಾಧೀಶರ ಕಾರ್ಯ ನಿರ್ವಹಿಸುತ್ತಿದ್ದನು. ಈ ಹುದ್ದೆ ನಾಲ್ಕಾರು ಊರುಗಳ ಮುಖಂಡರು ಒಮ್ಮತದಿಂದ ಒಪ್ಪಿದ ಸ್ಥಾನವಾಗಿದ್ದು, ಅಧಿಕಾರಯುತವಾಗಿದ್ದಿತು. ಹಲವಾರು ಸಂದರ್ಭಗಳಲ್ಲಿ ಇದು ವಂಶಪಾರಂಪರ್ಯವಾದ ಹುದ್ದೆಯಾಗಿರುತ್ತಿತ್ತು. ಕಟ್ಟೆಮನೆಯ ಬಗ್ಗೆ ಎಲ್ಲರೂ ಭಯಭಕ್ತಿಗಳಿಂದ ನಡೆದುಕೊಳ್ಳುತ್ತಿದ್ದು, ಈ ಮಟ್ಟದಲ್ಲಿ ಎಲ್ಲಾ ವಿವಾದಗಳೂ ಇತ್ಯರ್ಥವಾಗಿ ಬಿಡುತ್ತಿದ್ದವು. ಇಲ್ಲಿ ಇತ್ಯರ್ಥವಾಗದ ವಿವಾದಗಳನ್ನು ಮಾತ್ರ ಸಂಸ್ಥಾನಕ್ಕೆ ಕಳುಹಿಸಲಾಗುತ್ತಿತ್ತು. ಫಿರ್ಯಾದಿಗೆ ಸಂಸ್ಥಾನದ ನ್ಯಾಯನಿರ್ಣಯ ಸಮಾಧಾನ ತರದಿದ್ದಲ್ಲಿ ಆತ ಕೋರ್ಟುಗಳಿಗೂ ಅಪೀಲು ಹೋಗುವ ಅವಕಾಶವಿದ್ದಿತು.

ಮಾನವನ ನೈತಿಕ ಮತ್ತು ಸೈದ್ಧಾಂತಿಕ ಹಿನ್ನಲೆಗಳೊಂದಿಗೆ ಕಾರ್ಯ ನಿರ್ವಹಿಸುವ ನ್ಯಾಯಪದ್ಧತಿಯಲ್ಲಿ ದಂಡಿಸಲ್ಪಟ್ಟ ವ್ಯಕ್ತಿ ಸಾಮಾಜಿಕವಾಗಿ ಬಹಿಷ್ಕೃತನಾಗುತ್ತಿದ್ದು, ದಂಡನೆಗೆ ಒಳಗಾಗುವುದು ಒಂದು ಅವಮಾನವೆಂದು ಭಾವಿಸುತ್ತಿದ್ದನು.

ರಾಜ್ಯಾಡಳಿತದಲ್ಲಿ ರಾಜನೇ ನ್ಯಾಯಾಧಿಪತಿಯಾಗಿರುತ್ತಿದ್ದನು. ದುಷ್ಟ ಶಿಕ್ಷೆ ಶಿಷ್ಟರಕ್ಷೆಗಳನ್ನು ಮಾಡುತ್ತ ನ್ಯಾಯನಿರ್ಣಯಗಳನ್ನು ಕೈಗೊಳ್ಳುತ್ತಿದ್ದನು. ಮೈಸೂರು ಅರಸರ ಆಡಳಿತ ಪುನರಾರಂಭವಾದಾಗ ನ್ಯಾಯಾಡಳಿತಕ್ಕಾಗಿ ಪ್ರತ್ಯೇಕ ಇಲಾಖೆ ಅಸ್ತಿತ್ವದಲ್ಲಿರಲಿಲ್ಲ. ದಿವಾನರಾದ ಪೂರ್ಣಯ್ಯನವರು ಪೂರ್ವದಲ್ಲಿದ್ದ ಖಾಜಿಪದ್ಧತಿಯನ್ನು ಹಲವೆಡೆ ಮುಂದುವರೆಸಿದ್ದರೂ, ಖಾಜಿಗಳ ನ್ಯಾಯ ನಿರ್ಣಯಗಳು ಮುಸ್ಲಿಮರ ಧಾರ್ಮಿಕ ಸಂಪ್ರದಾಯಗಳಿಗೆ ಸೀಮಿತವಾಗಿದ್ದವು. ಹಿಂದೂಗಳ ನ್ಯಾಯ ತೀರ್ಮಾನಗಳು ಅವರ ಮೂಲ ಸಿದ್ಧಾಂತಗಳಂತೆಯೇ ನಡೆಯುತ್ತಿದ್ದು, ಇವುಗಳ ಅನುಪಸ್ಥಿತಿಯಲ್ಲಿ ಶಾಸ್ತ್ರಗಳನ್ನು ಆಧರಿಸಿ ನ್ಯಾಯನಿರ್ಣಯಗಳು ನಡೆಯುತ್ತಿದ್ದವು. ತಾಲೂಕು ಮಟ್ಟದ ಸರ್ಕಾರಿ ಅಧಿಕಾರಿಯಾದ ಅಮಲ್ದಾರನು ಪಂಚಾಯ್ತಿ ಸೇರಿಸಿ, ಅಹವಾಲುಗಳನ್ನು ಆಲಿಸಿ, ಆರೋಪಿಗಳನ್ನು ಪ್ರಶ್ನಿಸಿ ತಪ್ಪಿತಸ್ಥರನ್ನು ದಂಡನೆಗೆ ಒಳಪಡಿಸುತ್ತಿದ್ದನು. ಈ ವಿಷಯದಲ್ಲಿ ಪಂಚಾಯ್ತಿಯ ನಡಾವಳಿಗಳನ್ನು ಅಮಲ್ದಾರನು ತನ್ನ ವರದಿಯೊಂದಿಗೆ ದಿವಾನರಿಗೆ ರವಾನಿಸುತ್ತಿದ್ದನು. ಸಾಮಾನ್ಯವಾಗಿ ಇಂತಹ ವರದಿಗಳನ್ನು ದಿವಾನರು ಅನುಮೋದಿಸುತ್ತಿದ್ದರು. ವಿಶೇಷ ಸಂದರ್ಭಗಳಲ್ಲಿ ಮಾತ್ರ ಇವನ್ನು ಪರಿಷ್ಕರಿಸಿ ಬ್ರಿಟಿಷ್ ರೆಸಿಡೆಂಟರಿಗೆ ಕಳುಹಿಸಿ, ಅವರ ಒಪ್ಪಿಗೆಯ ಮೇರೆಗೆ ತೀರ್ಪು ನೀಡುತ್ತಿದ್ದರು.

ಈಗಿದ್ದಂತೆ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯನಿರ್ಣಯಗಳಲ್ಲಿ ಮಹತ್ತರವಾದ ವ್ಯತ್ಯಾಸಗಳೇನೂ ಇರಲಿಲ್ಲ. ಐದು ಚಿನ್ನದ ನಾಣ್ಯ (ಪಗೋಡ) ಗಳ ಮೌಲ್ಯದ ಆಸ್ತಿವಿವಾದಗಳನ್ನು ಮುಕ್ತ ನ್ಯಾಯಾಲಯದಲ್ಲಿ ಜನರ ಸಮ್ಮುಖದಲ್ಲಿ ತೀರ್ಮಾನಿಸುವ ಅಧಿಕಾರವನ್ನು ಅಮಲ್ದಾರನು ಹೊಂದಿದ್ದನು. ಈ ಮೊತ್ತಕ್ಕೆ ಮೇಲ್ಪಟ್ಟ ವಿವಾದಗಳು ಪಂಚಾಯ್ತಿಯಲ್ಲಿ ತೀಮಾನವಾಗುತ್ತಿದ್ದವು. ಸಿವಿಲ್ ದಾವೆಗಳ ತೀರ್ಮಾನ ಅತೃಪ್ತಿಕರವಾಗಿದ್ದಲ್ಲಿ ದಿವಾನರಲ್ಲಿ ಅಪೀಲು ಮಾಡಿಕೊಳ್ಳಬಹುದಿತ್ತು. ದಿವಾನರು ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಸಂದರ್ಶಿಸಿ, ಪ್ರತೀ ಜಿಲ್ಲೆಯ ಸಮಗ್ರ ಮಾಹಿತಿ ಉಳ್ಳವರಾಗಿರುತ್ತಿದ್ದರು.

ನ್ಯಾಯಾಡಳಿತಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯ ಅಗತ್ಯವನ್ನು ಮನಗಂಡ ದಿವಾನ್ ಪೂರ್ಣಯ್ಯನವರು ೧೮೦೫ರಲ್ಲಿ ಇದರ ಸ್ಥಾಪನೆಯ ಬಗ್ಗೆ ಬ್ರಿಟಿಷ್ ಸರ್ಕಾರಕ್ಕೆ ಅಧಿಕೃತ ಸೂಚನೆಯೊಂದನ್ನು ಕಳುಹಿಸಿದರು. ಇದರಂತೆ ಬ್ರಿಟಿಷ್ ಸರಕಾರ ಇಬ್ಬರು ಭಕ್ಷಿಗಳು, ಇಬ್ಬರು ಶಿರಸ್ತೇದಾರರು ಹಾಗೂ ಆರು ಮಂದಿ ಗಣ್ಯರನ್ನೊಳಗೊಂಡ ಅದಾಲತ್ ಸ್ಥಾಪನೆಗೆ ಅನುಮತಿ ನೀಡಿತು. ಇಂತಹ ಅದಾಲತ್‌ಗಳಲ್ಲಿ ನ್ಯಾಯಮೂರ್ತಿಗಳ ಸಮ್ಮುಖದಲ್ಲಿ ವಾದಪ್ರತಿವಾದಗಳು ನಡೆದು, ಫಿರ್ಯಾದಿ ಹಾಗೂ ಇತರರು ಇಲ್ಲಿ ಉಪಸ್ಥಿತರಿದ್ದು, ಅವುಗಳನ್ನು ಆಲಿಸುತ್ತಿದ್ದರು. ಸಂಬಂಧಪಟ್ಟ ದಾಖಲೆಗಳನ್ನು ಪುರಾವೆಗಳನ್ನಾಗಿ ಬಳಸಲಾಗುತ್ತಿತ್ತು. ವಾದಪ್ರತಿವಾದಗಳು

ದಾಖಲಾಗುತ್ತಿರಲಿಲ್ಲ. ರಾಜ್ಯದಲ್ಲಿ ೧೮೩೧ರಲ್ಲಿ ಬ್ರಿಟಿಷ್ ಕಮಿಷನ್ ಆಡಳಿತ ಪ್ರಾರಂಭವಾದ ನಂತರದಲ್ಲಿ ನ್ಯಾಯಾಡಳಿತ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳು ಕಂಡು ಬಂದವು. ನ್ಯಾಯಪಾಲನೆಗಾಗಿ ಕೆಳಹಂತದ ನ್ಯಾಯಾಲಯಗಳಾದ ಅಮಲ್ ಮತ್ತು ಟೌನ್ ಮುನ್ಸಿಫ್ ಕೋರ್ಟ್‌ಗಳು ಸ್ಥಾಪನೆಗೊಂಡವು. ಇವುಗಳ ಮೇಲಿನ ಹಂತದಲ್ಲಿ ಮೂಲದಾವೆಗಳ ಹಾಗೂ ಮೇಲ್ಮನವಿಯ ನ್ಯಾಯಾಲಯಗಳಾದ ಪ್ರಿನ್ಸಿಪಲ್ ಸದರ್ ಮುನ್ಸಿಫ್ ನ್ಯಾಯಾಲಯ ಹಾಗೂ ಯೂರೋಪಿಯನ್ ಸೂಪರಿಂಟೆಂಡೆಂಟರ ನ್ಯಾಯಾಲಯಗಳು ಕಾರ್ಯನಿರ್ವಹಿಸುತ್ತಿದ್ದವು. ಹುಜೂರ್ ಅದಾಲತ್ ಮತ್ತು ಕಮೀಷನರ್ ನ್ಯಾಯಾಲಯಗಳು ಅತ್ಯುಚ್ಚ ಮೇಲ್ಮನವಿ ನ್ಯಾಯಾಲಯಗಳಾಗಿದ್ದವು. ಒಂದು ನೂರು ರೂಪಾಯಿಗಳಿಗಿಂತ ಕಡಿಮೆ ಮೌಲ್ಯದ ದಾವೆಗಳನ್ನು ತೀರ್ಮಾನಿಸುವ ಅಧಿಕಾರವನ್ನು ಅಮಲ್ದಾರರೂ, ಐದು ನೂರು ರೂಪಾಯಿಗಳೊಳಗಿನ ಮೌಲ್ಯದ ದಾವೆಗಳನ್ನು ತೀರ್ಮಾನಿಸುವ ಅಧಿಕಾರವನ್ನು ಟೌನ್ ಮುನ್ಸಿಫರೂ ಹೊಂದಿದ್ದರು. ನಂತರದಲ್ಲಿ ಎಲ್ಲಾ ವಿಭಾಗಗಳಿಗೆ ನೇಮಿಸಲ್ಪಟ್ಟ ಪ್ರಿನ್ಸಿಪಲ್ ಸದರ್ ಮುನ್ಸಿಫರು ಒಂದು ನೂರರಿಂದ ಒಂದು ಸಾವಿರ ರೂಪಾಯಿ ಮೌಲ್ಯದ ಮೂಲದಾವೆಗಳನ್ನು ತೀರ್ಮಾನಿಸುವ ಅಧಿಕಾರ ಹೊಂದಿದ್ದರು. ಅಮಲ್ ನ್ಯಾಯಾಲಯಗಳಲ್ಲಿ ತೀರ್ಮಾನವಾಗದ ದಾವೆಗಳ ಮೇಲ್ಮನವಿಯನ್ನು ಈ ನ್ಯಾಯಾಲಯಕ್ಕೆ ಕೊಂಡೊಯ್ಯಬಹುದಾಗಿದ್ದಿತು. ಆಸ್ತಿ ಸಂಬಂಧಿತ ಒಂದು ಸಾವಿರಕ್ಕೆ ಮೇಲ್ಪಟ್ಟ ಮೌಲ್ಯದ ಮೂಲದಾವೆಗಳನ್ನು ಹಾಗೂ ತಮ್ಮ ಸರಹದ್ದಿನ ಕೆಳಮಟ್ಟದ ನ್ಯಾಯಾಲಯಗಳ ಮೇಲ್ಮನವಿಗಳನ್ನು ತೀರ್ಮಾನ ಮಾಡುವ ಅಧಿಕಾರವನ್ನು ಯೂರೋಪಿಯನ್ ಸೂಪರಿಂಟೆಂಡೆಂಟರ ನ್ಯಾಯಾಲಯಗಳು ಹೊಂದಿದ್ದವು.

ಛೀಫ್ ಕಮಿಷನರ ಸಹಾಯಕ್ಕಾಗಿ ೧೮೫೬ರಲ್ಲಿ ಜ್ಯುಡಿಷಿಯಲ್ ಕಮಿಷನರು ನೇಮಕಗೊಂಡರು. ಈ ಸಮಯದಲ್ಲಿ ಹುಜೂರ್ ಅದಾಲತ್ ಮತ್ತು ಮುನ್ಸಿಫ್ ನ್ಯಾಯಾಲಯಗಳು ರದ್ದುಗೊಳಿಸಲ್ಪಟ್ಟು, ಜ್ಯುಡಿಷಿಯಲ್ ಕಮಿಷನರ್, ವಿಭಾಗೀಯ ಸೂಪರಿಂಟೆಂಡರು, ಜಿಲ್ಲೆಯ ಡೆಪ್ಯುಟಿ ಸೂಪರಿಂಟೆಂಡರು, ಸ್ಮಾಲ್ ಕಾಸಸ್ ನ್ಯಾಯಾಲಯಗಳ ನ್ಯಾಯಾಧೀಶರು, ಯೂರೋಪಿಯನ್ ಅಸಿಸ್ಟೆಂಟ್ ಸೂಪರಿಂಟೆಂಡರು, ಭಾರತೀಯ ಅಸಿಸ್ಟೆಂಟ್ ಸೂಪರಿಂಟೆಂಡರು ಹಾಗೂ ಅಮಲ್ದಾರರು ನ್ಯಾಯಾಡಳಿತದ ಹೊಣೆ ಹೊತ್ತಿದ್ದ ಅಧಿಕಾರಿಗಳಾಗಿದ್ದರು. ೧೮೬೩ರಲ್ಲಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ಸಿವಿಲ್ ಕಾರ್ಯಭಾರ ಮೊಟಕುಗೊಂಡು ಜ್ಯುಡಿಷಿಯಲ್ ಅಸಿಸ್ಟೆಂಟರು ನೇಮಕಗೊಂಡರು. ೧೮೭೪ರಲ್ಲಿ ಅಮಲ್ದಾರರ ಜ್ಯುಡಿಷಿಯಲ್ ಕಾರ್ಯಭಾರ ಮುನ್ಸಿಫರಿಗೆ ವರ್ಗಾವಣೆ ಗೊಂಡಿತು. ಸಿವಿಲ್ ದಾವೆಗಳ ನಿರ್ವಹಣೆಯೂ ಇವರಿಗೇ ನೀಡಲ್ಪಟ್ಟಿತು.

೧೮೭೯ರಲ್ಲಿ ಡೆಪ್ಯುಟಿ ಕಮಿಷನರ್ ಅವರಿಗೆ ದತ್ತವಾಗಿದ್ದ ಸಿವಿಲ್ ದಾವೆಗಳ ಅಧಿಕಾರ ಮೊಟಕುಗೊಂಡಿತು. ಇದನ್ನು ನಿರ್ವಹಿಸಲು ಜಿಲ್ಲಾ ನ್ಯಾಯಾಧೀಶರು ನೇಮಕಗೊಂಡರು. ನಂತರದಲ್ಲಿ ಜ್ಯುಡಿಷಿಯಲ್ ಅಸಿಸ್ಟೆಂಟರ ಸ್ಥಾನದಲ್ಲಿ ಉಪನ್ಯಾಯಾಧೀಶರು ನೇಮಕವಾದರು. ೧೮೮೪ರಲ್ಲಿ ಮೂರು ನ್ಯಾಯಾಧೀಶರನ್ನೊಳಗೊಂಡ ಛೀಫ್ ಕೋರ್ಟ್ ಸ್ಥಾಪನೆಗೊಂಡಿತು. ಈ ನ್ಯಾಯಾಲಯ ರಾಜ್ಯದ ಅತ್ಯುನ್ನತ ಮೇಲ್ಮನವಿ ನ್ಯಾಯಾಲಯವಾಗಿದ್ದು, ದಾವೆಗಳ ಉಲ್ಲೇಖ ಹಾಗೂ ಪುನರ್ವಿಮರ್ಶಾತ್ಮಕ ಅಧಿಕಾರವನ್ನು ಮತ್ತು ರಾಜ್ಯದ ಎಲ್ಲಾ ನ್ಯಾಯಾಲಯಗಳ ಮೇಲೆ ಆಡಳಿತಾತ್ಮಕ ಹತೋಟಿಯನ್ನು ಹೊಂದಿದ್ದಿತು. ಛೀಫ್ ಕೋರ್ಟ್‌ನ ಅಧೀನದಲ್ಲಿದ್ದ ಜಿಲ್ಲಾ ನ್ಯಾಯಾಲಯಗಳು ತಮ್ಮ ಅಧೀನ ನ್ಯಾಯಾಲಯಗಳ ಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದಿದ್ದು, ಅವುಗಳಿಂದ ಬಂದ ಮೇಲ್ಮನವಿಗಳನ್ನು ಆಲಿಸಿ ತೀರ್ಮಾನ ನೀಡುತ್ತಿದ್ದವು.

ಕ್ರಿಮಿನಲ್ ನ್ಯಾಯಾಡಳಿತಕ್ಕೆ ಸಂಬಂಧಿಸಿದಂತೆ ೧೮೭೭ರ ಕ್ರಿಮಿನಲ್ ಪ್ರೊಸೀಜರ್ ಕೋಡ್ ಇಡೀ ರಾಷ್ಟ್ರಕ್ಕೆ ಸಂಬಂಧಿಸಿದಂತೆ ಜಾರಿಯಲ್ಲಿತ್ತು. ೧೮೮೦ರಲ್ಲಿ ಮುನ್ಸಿಫರನ್ನು ಪದನಿಮಿತ್ತ ತಾಲೂಕು ದಂಡಾಧಿಕಾರಿಯಾಗಿಯೂ ನೇಮಿಸಲಾಯಿತು. ೧೮೮೧ರ ಸಮಯದಲ್ಲಿ ಕ್ರಿಮಿನಲ್ ನ್ಯಾಯಾಡಳಿತವು ಮುಖ್ಯ ನ್ಯಾಯಾಧೀಶರ ಆಡಳಿತದಲ್ಲಿದ್ದಿತು. ಇವರ ನ್ಯಾಯಾಲಯವು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನ ಪ್ರಕಾರ ಹೈಕೋರ್ಟ್ ಮಾದರಿಯ ಅಧಿಕಾರ ಹೊಂದಿದ್ದಿತು. ತದನಂತರ ಸತ್ರ ಹಾಗೂ ಸಹಾಯಕ ಸತ್ರ ನ್ಯಾಯಾಧೀಶರು, ಜಿಲ್ಲಾ ಮ್ಯಾಜಿಸ್ಟ್ರೇಟರು, ಎರಡನೇ ಹಾಗೂ ಮೂರನೇ ದರ್ಜೆಯ ಮ್ಯಾಜಿಸ್ಟ್ರೇಟರು ತಂತಮ್ಮ ವ್ಯಾಪ್ತಿಯಲ್ಲಿ ಕ್ರಿಮಿನಲ್ ಮೊಕದ್ದಮೆಗಳ ವಿಚಾರಣೆ ನಡೆಸುತ್ತಿದ್ದರು. ೧೯೦೭ರಲ್ಲಿ ಅಮಲ್ದಾರರನ್ನು ಮ್ಯಾಜಿಸ್ಟ್ರೇಟ್ ಕರ್ತವ್ಯಗಳಿಂದ ಮುಕ್ತಗೊಳಿಸಲಾಯಿತು ಹಾಗೂ ಮುನ್ಸಿಫರಿಗೆ ಕ್ರಿಮಿನಲ್ ಮೊಕದ್ದಮೆಗಳ ವ್ಯಾಪ್ತಿಯನ್ನು ವಹಿಸಲಾಯಿತು. ಎಲ್ಲಾ ಜಿಲ್ಲೆಗಳಲ್ಲಿಯೂ

ಸಣ್ಣ ಮೊಕದ್ದಮೆಗಳ ವಿಚಾರಣೆಯನ್ನು ಗೌರವ ಬೆಂಚ್ ಮ್ಯಾಜಿಸ್ಟ್ರೇಟ್‌ಗಳು ನಡೆಸುತ್ತಿದ್ದರು. ೧೯೫೬ರ ಜೂನ್ ಒಂದರವರೆಗೆ ಜಿಲ್ಲೆಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳ ಆಡಳಿತ ಮತ್ತು ಹತೋಟಿ ಜಿಲ್ಲಾ ದಂಡಾಧಿಕಾರಿಯಾದ ಡೆಪ್ಯುಟಿ ಕಮಿಷನರ್ ಅಡಿಯಲ್ಲಿತ್ತು. ಮೇಲ್ಕಂಡ ದಿನಾಂಕದಿಂದ ನ್ಯಾಯಾಂಗ ಹಾಗೂ ಕಾರ್ಯಾಂಗಗಳು ಪ್ರತ್ಯೇಕಗೊಂಡು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳನ್ನು ಜ್ಯುಡಿಷಿಯಲ್ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಆಡಳಿತಕ್ಕೊಳಪಡಿಸಲಾಯಿತು. ಇವರನ್ನು ರಾಜ್ಯ ಸರ್ಕಾರ ನೇಮಕ ಮಾಡುತ್ತಿತ್ತು. ಕೋಲಾರದಲ್ಲಿ ಸಿವಿಲ್ ನ್ಯಾಯಾಧೀಶರೂ ಆಗಿದ್ದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಪ್ರಥಮ ದರ್ಜೆಯ ನ್ಯಾಯಾಧೀಶರ ಅಧಿಕಾರ ಹೊಂದಿದ್ದು, ಕೋಲಾರ, ಮಾಲೂರು, ಮುಳಬಾಗಿಲು, ಶ್ರೀನಿವಾಸಪುರ ಮತ್ತು ಚಿಂತಾಮಣಿ ತಾಲೂಕುಗಳ ಪ್ರಕರಣಗಳನ್ನು ಇತ್ಯರ್ಥ ಮಾಡುತ್ತಿದ್ದರು.

ಕೋಲಾರ ಜಿಲ್ಲೆಯಲ್ಲಿ ಜಿಲ್ಲಾ ಸತ್ರ ನ್ಯಾಯಾಲಯದ ಸ್ಥಾಪನೆಗೆ ಮೊದಲು ಬೆಂಗಳೂರಿನ ಸತ್ರ ನ್ಯಾಯಾಲಯದ ನ್ಯಾಯಾಧೀಶರು ಕೋಲಾರ ಜಿಲ್ಲಾ ವ್ಯಾಪ್ತಿಯನ್ನು ಹೊಂದಿದ್ದರು. ಹಳೇ ಮೈಸೂರು ಪ್ರಾಂತದಲ್ಲಿ ಸತ್ರ ನ್ಯಾಯಾಲಯಗಳ ಸ್ಥಾಪನೆಯಲ್ಲಿ ಏಕರೂಪತೆ ಸಾಧಿಸುವ ನಿಟ್ಟಿನಲ್ಲಿ ಕೋಲಾರದ ರೆವಿನ್ಯೂ ಜಿಲ್ಲೆಗೆ ಜಿಲ್ಲಾ ಸತ್ರ ನ್ಯಾಯಾಲಯ ೧೯೬೪ರ ಅಕ್ಟೋಬರ್ ಒಂದರಂದು ಸ್ಥಾಪಿಸಲ್ಪಟ್ಟಿತು. ಜಿಲ್ಲಾ ಸತ್ರ ನ್ಯಾಯಾಧೀಶರು ಜಿಲ್ಲಾ ನ್ಯಾಯಾಂಗದ ಅತ್ಯುನ್ನತ ಅಧಿಕಾರಿಯಾಗಿರುತ್ತಾರೆ. ಇವರು ಜಿಲ್ಲೆಯ ಇತರ ಎಲ್ಲಾ ನ್ಯಾಯಾಲಯಗಳ ಮೇಲೂ ಆಡಳಿತಾತ್ಮಕ ಅಧಿಕಾರ ಹೊಂದಿರುತ್ತಾರೆ.

ಈ ಮುಂದೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ನ್ಯಾಯಾಲಯಗಳ ಪಟ್ಟಿಯನ್ನು, ಪ್ರತೀ ನ್ಯಾಯಾಲಯದಲ್ಲಿ ದಾಖಲೆಯಾದ ಹಾಗೂ ತೀರ್ಮಾನವಾದ ದಾವೆಗಳ ಮತ್ತು ಆಯವ್ಯಯಗಳ ವಿವರಗಳನ್ನು ನೀಡಲಾಗಿದೆ.

(ವಿ.ಸೂ.: ಸಿವಿಲ್ ಪಟ್ಟಿಯಲ್ಲಿ ಒಟ್ಟು ೨೯ ನ್ಯಾಯಾಲಯಗಳಿದ್ದು, ೨೩ ನ್ಯಾಯಾಲಯಗಳ ವಿವರಗಳನ್ನು ಮಾತ್ರ ನೀಡಲಾಗಿದೆ. ಕ್ರಮ ಸಂಖ್ಯೆ ಎರಡು ಮತ್ತು ಮೂರರ ವಿವರಗಳು ಮೊದಲ ಸಂಖ್ಯೆಯ ವಿವರಗಳಲ್ಲಿಯೂ, ಐದನೇ ಕ್ರಸಂ. ವಿವರಗಳು ನಾಲ್ಕರಲ್ಲಿಯೂ, ೨೫, ೨೬ ಮತ್ತು ೨೮ನೇ ಕ್ರಸಂ. ವಿವರಗಳು ಕ್ರಸಂ.೧೨ ರಲ್ಲಿಯೂ ಸೇರಿವೆ).

**೧. ೨೦೦೨–೨೦೦೩ರಲ್ಲಿದ್ದಂತೆ ಕೋಲಾರ ನಗರ ಹಾಗೂ ಜಿಲ್ಲೆಯ ವಿವಿಧೆಡೆ ಕಾರ್ಯನಿರ್ವಹಿಸುತ್ತಿದ್ದ ನ್ಯಾಯಾಲಯಗಳ ಪಟ್ಟಿ ಈ ಕೆಳಕಂಡಂತೆ ಇದೆ.**

೧ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ

ಅ. ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ

ಆ. ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ

೨. ಪ್ರಧಾನ ಸಿವಿಲ್ ನ್ಯಾಯಾಧೀಶರ (ಹಿ.ವಿ.) ಮತ್ತು ಸಿ.ಜೆ.ಎಂ.ನ್ಯಾಯಾಲಯ, ಕೋಲಾರ

೩. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಹಿ.ವಿ.) ಮತಸ್ತ್ತ ಸಿ. ಜೆ.ಎಂ.ನ್ಯಾಯಾಲಯ, ಕೋಲಾರ

೪. ಸಿವಿಲ್ ನ್ಯಾಯಾಧೀಶರ (ಹಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕೆ.ಜಿ.ಎಫ್.

೫ ಸಿವಿಲ್ ನ್ಯಾಯಾಧೀಶರ (ಹಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಚಿಕ್ಕಬಳ್ಳಾಪುರ

೬ ಸಿವಿಲ್ ನ್ಯಾಯಾಧೀಶರ (ಹಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಚಿಂತಾಮಣಿ

೭ ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ. ಚಿಕ್ಕಬಳ್ಳಾಪುರ

೮. ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಗೌರಿಬಿದನೂರು

೯. ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ, ಮತ್ತು ಜೆ.ಎಂ.ಎಫ್.ಸಿ. ಬಾಗೇಪಲ್ಲಿ

೧೦. ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಮಾಲೂರು

೧೧. ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಶಿಡ್ಲಘಟ್ಟ

೧೨. ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಮುಳಬಾಗಿಲು

೧೩. ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಚಿಂತಾಮಣಿ

೧೪. ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕೆ.ಜಿ.ಎಫ್.

೧೫. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಕೆ.ಜಿ.ಎಫ್.

೧೬. ಪ್ರಧಾನ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ, ಕೋಲಾರ

೧೭. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ. ಕೋಲಾರ

೧೮. ಸಿವಿಲ್ ನ್ಯಾಯಾಧೀಶರ (ಕಿ.ವಿ) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಶ್ರೀನಿವಾಸಪುರ

೧೯. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿ.ವಿ) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಗೌರಿಬಿದನೂರು

೨೦. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿ.ವಿ) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಚಿಂತಾಮಣಿ

೨೧. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿ.ವಿ) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಚಿಕ್ಕಬಳ್ಳಾಪುರ

೨೨. ಸಿವಿಲ್ ನ್ಯಾಯಾಧೀಶರ (ಕಿ.ವಿ.) ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.ಗುಡಿಬಂಡೆ

೨೩. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿ.ವಿ) ನ್ಯಾಯಾಲಯ, ಮಾಲೂರು

೨೪. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿ.ವಿ) ನ್ಯಾಯಾಲಯ, ಮುಳಬಾಗಿಲು

೨೫. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿ.ವಿ) ನ್ಯಾಯಾಲಯ, ಕೆ.ಜಿ.ಎಫ್.

೨೬. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿ.ವಿ) ನ್ಯಾಯಾಲಯ, ಶ್ರೀನಿವಾಸಪುರ

೨೭. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿ.ವಿ) ನ್ಯಾಯಾಲಯ, ಶಿಡ್ಲಘಟ್ಟ

(ಹಿ.ವಿ.– ಹಿರಿಯ ವಿಭಾಗ, ಕಿ.ವಿ. – ಕಿರಿಯ ವಿಭಾಗ)

### ಸಿವಿಲ್

೧ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ

೨. ಪ್ರಧಾನ ಸಿವಿಲ್ ನ್ಯಾಯಾಧೀಶರು (ಹಿವಿ) ಮತ್ತು ಸಿಜೆಎಮ್ ನ್ಯಾಯಾಲಯ, ಕೋಲಾರ

೩. ಸಿವಿಲ್ ನ್ಯಾಯಾಧೀಶರು (ಹಿವಿ) ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ಕೆಜಿಎಫ್

೪. ಸಿವಿಲ್ ನ್ಯಾಯಾಧೀಶರು (ಹಿವಿ) ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ಚಿಂತಾಮಣಿ

೫ ಸಿವಿಲ್ ನ್ಯಾಯಾಧೀಶರು (ಹಿವಿ) ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ಚಿಕ್ಕಬಳ್ಳಾಪುರ

೬ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕೋಲಾರ

೭ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್ಎಫ್‌ಸಿ ನ್ಯಾಯಾಲಯ, ಕೋಲಾರ

೮. ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಅಪರ ಜೆಎಮ್‌ಎಫ್‌ಸಿ ನ್ಯಾಯಾಲಯ, ಕೆಜಿಎಫ್

೯. ೧ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಅಪರ ಜೆಎಮ್‌ಎಫ್‌ಸಿ ನ್ಯಾಯಾಲಯ, ಕೆಜಿಎಫ್

೧೦. ೨ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿವಿ) ನ್ಯಾಯಾಲಯ, ಕೆಜಿಎಫ್

೧೧. ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಚಿಂತಾಮಣಿ

೧೨. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಚಿಂತಾಮಣಿ

೧೩. ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಚಿಕ್ಕಬಳ್ಳಾಪುರ

೧೪. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಚಿಕ್ಕಬಳ್ಳಾಪುರ

೧೫ ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಮಾಲೂರು

೧೬. ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಮುಳಬಾಗಿಲು

೧೭ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಶ್ರೀನಿವಾಸಪುರ

೧೮. ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಶಿಡ್ಲಘಟ್ಟ

೧೯. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿವಿ), ಶಿಡ್ಲಘಟ್ಟ

೨೦. ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಬಾಗೇಪಲ್ಲಿ

೨೧. ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಗೌರಿಬಿದನೂರು

೨೨. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಗೌರಿಬಿದನೂರು

೨೩. ಸಿವಿಲ್ ನ್ಯಾಯಾಧೀಶರು (ಕಿವಿ) ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ಗುಡಿಬಂಡೆ

**ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ನ್ಯಾಯಾಲಯಗಳಲ್ಲಿ ದಾಖಲಾದ ಹಾಗೂ ತೀರ್ಮಾನವಾದ ಕ್ರಿಮಿನಲ್ ಹಾಗೂ ಸಿವಿಲ್ ಪ್ರಕರಣಗಳ ವಿವರಗಳನ್ನೂ, ಆಯವ್ಯಯ ಅಂಕಿ-ಅಂಶಗಳನ್ನೂ ಈ ಮುಂದೆ ನೀಡಿದೆ.**

## ಕ್ರಿಮಿನಲ್

### ೧. ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳು, ಕೋಲಾರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೧೫೧೧ | ೧೪೭೬ | ೨,೪೪,೭೩೨ | ೫೧,೭೬,೮೬೮ |
| ೨. | ೧೯೯೯-೨೦೦೦ | ೧೫೫೯ | ೧೪೮೨ | ೧,೨೮,೭೩೦ | ೯೫,೫೬,೧೬೭ |
| ೩. | ೨೦೦೦-೨೦೦೧ | ೨೦೨೧ | ೧೪೬೪ | ೧,೭೪,೩೨೫ | ೪೦,೫೮,೯೩೨ |
| ೪. | ೨೦೦೧-೨೦೦೨ | ೨೯೦ | ೧೭೭೪ | ೩,೩೪,೨೧೬ | ೬೧,೮೨,೫೬೩ |
| ೫ | ೨೦೦೨-೨೦೦೩ | ೧೮೨೨ | ೧೨೫೩ | ೧೩೭೦೪೮ | ೭೬,೫೨,೯೩೯ |

### ೨. ಪ್ರಧಾನ ಸಿವಿಲ್ ನ್ಯಾಯಧೀಶರು (ಹಿ.ವಿ) ಮತ್ತು ಸಿ.ಜೆ.ಎಂ ನ್ಯಾಯಾಲಯ, ಕೋಲಾರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೧೨೨ | ೮೪೫ | ೨೫,೧೨,೪೩೨ | ೯,೦೫,೩೨೫ |
| ೨. | ೧೯೯೯-೨೦೦೦ | ೭೦೭ | ೧,೧೪೩ | ೩೯,೩೧೧ | ೧೭,೩೭,೩೧೧ |
| ೩. | ೨೦೦೦-೨೦೦೧ | ೫೮೭ | ೬೩೬ | ೪,೨೫,೨೧೮ | ೨,೨೪,೮೯೨ |
| ೪. | ೨೦೦೧-೨೦೦೨ | ೧೬೯ | ೧,೦೧೧ | ೩,೩೮,೭೯ | ೧೧,೮೭,೩೮೬ |
| ೫ | ೨೦೦೨-೨೦೦೩ | ೧೫೬ | ೮೦ | ೫,೩೪,೮೪೨ | ೨೧,೭೬,೦೯ |

### ೩. ಸಿವಿಲ್ ನ್ಯಾಯಾಧೀಶರ (ಹಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೆ.ಜಿ.ಎಫ್

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೧೩೪ | ೯೧೯ | ೧,೬೩,೫೯೦ | ೨೪,೮೪,೨೬೬ |
| ೨. | ೧೯೯೯-೨೦೦೦ | ೮೫೮ | ೯೧೭ | ೨,೨೩,೦೯ | ೩೩,೪೬,೯೪೦ |
| ೩. | ೨೦೦೦-೨೦೦೧ | ೯೯೯ | ೯೩೩ | ೧,೩೫,೨೧೫ | ೩೧,೧೦,೧೨೫ |
| ೪. | ೨೦೦೧-೨೦೦೨ | ೧೬೦ | ೧೩೦ | ೩,೭೩,೨೦೫ | ೩೮,೭೩,೪೧೯ |
| ೫ | ೨೦೦೨-೨೦೦೩ | ೯೫೧ | ೧೬೯ | ೩,೪೧,೪೭೦ | ೩೫,೪೦,೦೭೫ |

### ೪. ಸಿವಿಲ್ ನ್ಯಾಯಾಧೀಶರು (ಹಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಂತಾಮಣಿ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೧೪೪ | ೩೫ | ೮೫೦ | ೨೨೨ |
| ೨. | ೧೯೯೯-೨೦೦೦ | ೧೧೫ | ೨೫ | ೧೯೫೦ | ೬೮೧ |
| ೩. | ೨೦೦೦-೨೦೦೧ | ೩೫ | ೨೬೪ | ೩೩,೫೨೮ | ೧೩೪ |
| ೪. | ೨೦೦೧-೨೦೦೨ | ೧೭೮ | ೨೬೮ | ೫೧,೭೦೮ | ೪೯೯ |
| ೫ | ೨೦೦೨-೨೦೦೩ | ೧೮೨ | ೧೭೯ | ೧,೦೬,೨೩೬ | ೬೦೦ |

### ೫. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. : ಕೋಲಾರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೧೦೫೨ | ೫೬೭ | | |
| ೨. | ೧೯೯೯-೨೦೦೦ | ೮೪೫ | ೫೮೨ | ಸಿವಿಲ್ ನ್ಯಾಯಾಲಯ | |
| ೩. | ೨೦೦೦-೨೦೦೧ | ೭೩೩ | ೩೦೧ | (ಹಿ.ವಿ.) ಮತ್ತು ಸಿ.ಜೆ.ಎಂ. | |
| ೪. | ೨೦೦೧-೨೦೦೨ | ೮೦೮ | ೫೮೮ | ಕೋಲಾರದಲ್ಲಿ ಇರುವಂತೆ | |
| ೫ | ೨೦೦೨-೨೦೦೩ | ೮೪೧ | ೮೩೪ | | |

## ೬. ಸಿವಿಲ್ ನ್ಯಾಯಾಧೀಶರು (ಕಿ.ಶ್ರೇಣಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕೆ.ಜಿ.ಎಫ್

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೫೭೦ | ೫೪೯ | ಪ್ರಧಾನ ಸಿವಿಲ್ | |
| ೨. | ೧೯೯೯-೨೦೦೦ | ೩೮೦ | ೪೭೯ | ನ್ಯಾಯಾಧೀಶರು (ಹಿ.ವಿ) ಮತ್ತು | |
| ೩. | ೨೦೦೦-೨೦೦೧ | ೩೩೩ | ೩೭೯ | ಜೆ.ಎಂ.ಎಫ್.ಸಿ. ನ್ಯಾಯಾಲಯದ | |
| ೪. | ೨೦೦೧-೨೦೦೨ | ೪೪೧ | ೩೮೮ | ಸ್ಟೇಟ್‌ಮೆಂಟಿನಲ್ಲಿ ನಮೂದಿಸಲಾಗಿದೆ | |
| ೫. | ೨೦೦೨-೨೦೦೩ | ೩೬೨ | ೫೯೭ | | |

## ೭. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿ.ಶ್ರೇಣಿ)ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಕೆ.ಜಿ.ಎಫ್

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೪೭೦ | ೩೪೨ | ಪ್ರಧಾನ ಸಿವಿಲ್ | |
| ೨. | ೧೯೯೯-೨೦೦೦ | ೩೨೩ | ೩೧೯ | ನ್ಯಾಯಾಧೀಶರು (ಹಿ.ವಿ) ಮತ್ತು | |
| ೩. | ೨೦೦೦-೨೦೦೧ | ೨೬೬ | ೪೨೦ | ಜೆ.ಎಂ.ಎಫ್.ಸಿ. ನ್ಯಾಯಾಲಯದ | |
| ೪. | ೨೦೦೧-೦೦೨ | ೩೦೮ | ೬೧೦ | ಸ್ಟೇಟ್‌ಮೆಂಟಿನಲ್ಲಿ ನಮೂದಿಸಲಾಗಿದೆ. | |
| ೫. | ೨೦೦೨-೨೦೦೩ | ೧೯೯ | ೯೦೪ | | |

## ೮. ಸಿವಿಲ್ ನ್ಯಾಯಾಧೀಶರು (ಕಿ.ವಿ)ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಕ್ಕಬಳ್ಳಾಪುರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೪೯೯ | ೪೧೮ | ೩,೧೪,೨೧೮ | ೧೬,೦೯,೯೨೬ |
| ೨. | ೧೯೯೯-೨೦೦೦ | ೨೭೭ | ೨೧೩ | ೨,೪೪,೬೩೨ | ೧೭,೦೨,೩೭೯ |
| ೩. | ೨೦೦೦-೨೦೦೧ | ೫೭೯ | ೪೭೯ | ೨,೧೮೩೬೬ | ೨೨೩೨೪೭೩ |
| ೪. | ೨೦೦೧-೨೦೦೨ | ೩೧೫ | ೨೪೩ | ೨೪೯೨೯೧ | ೧೭೯೨೨೬ |
| ೫. | ೨೦೦೨-೨೦೦೩ | ೩೧೫ | ೨೪೨ | ೨೬೦೧೮೩ | ೧೯೭೨೪೩೪ |

## ೯. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಚಿಕ್ಕಬಳ್ಳಾಪುರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | – | – | – | – |
| ೨. | ೧೯೯೯-೨೦೦೦ | – | – | – | – |
| ೩. | ೨೦೦೦-೨೦೦೧ | – | ▯ | – | – |
| ೪. | ೨೦೦೧-೨೦೦೨ | ೨೩೬ | ೭೫ | ೨೪೯೨೯೧ | ೫೦೭೧೪೮ |
| ೫. | ೨೦೦೨-೨೦೦೩ | ೩೦೫ | ೩೦೯ | – | ೪೭೨೧೯೭ |

### ೧೦. ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಚಿಂತಾಮಣಿ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮–೧೯೯೯ | ೪೮೯ | ೩೮೩ | ೩೧೨೫ | ೪೦೦ |
| ೨. | ೧೯೯೯–೨೦೦೦ | ೫೫೭ | ೩೫೫ | ೮೬೧೮೦ | ೧೫೦ |
| ೩. | ೨೦೦೦–೨೦೦೧ | ೫೬೪ | ೩೮೭ | ೧೨೯೭೫ | ೨೬೪ |
| ೪. | ೨೦೦೧–೨೦೦೨ | ೬೩೮ | ೬೨೭ | ೬೭೬೦೦ | ೪೩೨ |
| ೫ | ೨೦೦೨–೨೦೦೩ | ೩೬೧ | ೪೯೫ | ೪೫೬೬೫ | ೪೪೩ |

### ೧೧. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ, ಚಿಂತಾಮಣಿ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮–೧೯೯೯ | ೧೨ | ೨೨೩ | ೫೯೦೦ | ೪೦೦ |
| ೨. | ೧೯೯೯–೨೦೦೦ | ೨೧೧ | ೨೯೯ | ೧೧೬೦೦ | ೧೫೦ |
| ೩. | ೨೦೦೦–೨೦೦೧ | ೨೫೫ | ೨೮೦ | ೮೧೫೦ | ೨೬೪ |
| ೪. | ೨೦೦೧–೨೦೦೨ | ೧೫೭ | ೨೦೭ | ೧೦೬೫೦ | ೪೩೨ |
| ೫ | ೨೦೦೨–೨೦೦೩ | ೧೫೧ | ೨೫೦ | ೨೫೫೫೦ | ೪೪೩ |

### ೧೨. ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಾಗೇಪಲ್ಲಿ.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮–೧೯೯೯ | ೬೦೧ | ೫೭೬ | ೨೯೧೭೫ | ೧೦೫೯೭೦ |
| ೨. | ೧೯೯೯–೨೦೦೦ | ೪೮೭ | ೪೮೯ | ೧೦೭೫೪ | ೬೧೫೯೫೦ |
| ೩. | ೨೦೦೦–೨೦೦೧ | ೪೯೦ | ೪೨೭ | ೧೮೯ | ೧೦೨೬೩೦ |
| ೪. | ೨೦೦೧–೨೦೦೨ | ೪೬೦ | ೩೫೮ | ೨೫೭೪ | ೭೪೮೦೫೦ |
| ೫ | ೨೦೦೨–೨೦೦೩ | ೪೪೨ | ೨೮೦ | ೪೨೮೮೦ | ೬೦೨೫೦೦ |

### ೧೩. ಸಿವಿಲ್ ನ್ಯಾಯಾಧೀಶರು (ಕಿ.ವಿ) ಜೆ.ಎಂ.ಎಫ್.ಸಿ. ನ್ಯಾಯಾಲಯ, ಗೌರಿಬಿದನೂರು

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮–೧೯೯೯ | ೫೯೯ | ೩೭೪ | ೨೫೯೩೮ | ೪೯೫೨೭ |
| ೨. | ೧೯೯೯–೨೦೦೦ | ೫೫೦ | ೫೦೭ | ೧೪೧೧೪೨ | ೧೦೪೩೬೨ |
| ೩. | ೨೦೦೦–೨೦೦೧ | ೪೯೩ | ೫೫೪ | ೧೫೬೪೦೦ | ೧೧೪೩೧೩೩ |
| ೪. | ೨೦೦೧–೨೦೦೨ | ೪೫೩ | ೪೮೭ | ೨೯೮೦೨೦ | ೧೮೫೬೩೪ |
| ೫ | ೨೦೦೨–೨೦೦೩ | ೩೯೩ | ೪೯೫ | ೨೧೯೧೮ | ೧೨೯೮೬೫ |

## ೧೪. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯ, ಗೌರಿಬಿದನೂರು

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೧೬ | ೩೫೧ | ೨೫೯೯೩೮ | ೪೯೫೮೨೭ |
| ೨. | ೧೯೯೯-೨೦೦೦ | ೧೯೦ | ೧೮೨ | ೧೪೧೧೪೨ | ೧೦೪೩೭೨ |
| ೩. | ೨೦೦೦-೨೦೦೧ | ೧೬೭ | ೮೩ | ೧೫೮೪೦೦ | ೧೧೪೩೧೩೩ |
| ೪. | ೨೦೦೧-೨೦೦೨ | ೨೦೨ | ೨೧೪ | ೨೫೯೮೨೦ | ೧೮೫೬೭೪ |
| ೫. | ೨೦೦೨-೨೦೦೩ | ೨೧೯ | ೩೩೪ | ೨೧೯೯೧೮ | ೧೨೪೯೮೬೫ |

## ೧೫. ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಶಿಡ್ಲಘಟ್ಟ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೫೮೪ | ೪೮೭ | ೪೯೭೭೨೩ | – |
| ೨. | ೧೯೯೯-೨೦೦೦ | ೧೨೯೪ | ೨೭೭ | ೧೧೬೭೭೦ | – |
| ೩. | ೨೦೦೦-೨೦೦೧ | ೫೬೩ | ೬೩೮ | ೨೭೯೩೪೩ | – |
| ೪. | ೨೦೦೧-೨೦೦೨ | ೩೩೪ | ೫೬೩ | ೨೦೮೦೪೬ | – |
| ೫. | ೨೦೦೨-೨೦೦೩ | ೪೫೭ | ೬೬೨ | ೨೪೦೩೮೧ | – |

## ೧೬. ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಲೂರು

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೧೨೫೦ | ೮೦೭ | ೫೮೪ | – |
| ೨. | ೧೯೯೯-೨೦೦೦ | ೬೭೦ | ೮೨೨ | ೫೮೧೩ | – |
| ೩. | ೨೦೦೦-೨೦೦೧ | ೭೭೬ | ೭೪೦ | ೪೫೬೪ | – |
| ೪. | ೨೦೦೧-೨೦೦೨ | ೬೮೨ | ೬೫೬ | ೫೧೫೧ | – |
| ೫. | ೨೦೦೨-೨೦೦೩ | ೭೫೬ | ೫೮೨ | ೬೯೪೦ | – |

## ೧೭. ಸಿವಿಲ್ ನ್ಯಾಯಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಳಬಾಗಿಲು

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೪೬೫ | ೫೮೧ | ೭೬೧೪೦ | ೧೬೧೩೫೬ |
| ೨. | ೧೯೯೯-೨೦೦೦ | ೯೨೦ | ೬೯೧ | ೮೫೧೯ | ೨೧೦೯೬೦ |
| ೩. | ೨೦೦೦-೨೦೦೧ | ೮೯ | ೫೯೪ | ೧೨೦೪೫೦ | ೨೮೧೬೮೪೦ |
| ೪. | ೨೦೦೧-೨೦೦೨ | ೭೯೨ | ೮೭೩ | ೨೧೦೫೯೨ | ೨೬೪೬೩೮೦ |
| ೫. | ೨೦೦೨-೨೦೦೩ | ೭೫೬ | ೮೯೧ | ೨೬೨೯೧೬ | ೧೪೬೩೭೮೨ |

### ೧೮. ಸಿವಿಲ್ ನ್ಯಾಯಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಶ್ರೀನಿವಾಸಪುರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೧೦೪೫ | ೪೪೫ | ೨೫೯ | – |
| ೨. | ೧೯೯೯-೨೦೦೦ | ೧೦೨೧ | ೩೦೭ | ೨೯೮೬ | – |
| ೩. | ೨೦೦೦-೨೦೦೧ | ೧೫೪ | ೫೮೨ | ೬೪೪ | – |
| ೪. | ೨೦೦೧-೨೦೦೨ | ೧೫೬೫ | ೫೫೨ | ೭೫೮೨ | – |
| ೫. | ೨೦೦೨-೨೦೦೩ | ೧೨೭ | ೨೨೪೩ | ೯೯೭ | – |

### ೧೯. ಸಿವಿಲ್ ನ್ಯಾಯಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ, ಗುಡಿಬಂಡೆ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೯೧ | ೧೨ | ೪೪೮೨೫ | ೩೨೦೧೨೩ |
| ೨. | ೧೯೯೯-೨೦೦೦ | ೨೬ | ೯೮ | ೮೯೭೭ | ೧೩೮೩೦೫೦ |
| ೩. | ೨೦೦೦-೨೦೦೧ | ೨೮ | ೧೫ | ೪೪೨೬೧ | ೧೬೬೬೫೬೬ |
| ೪. | ೨೦೦೧-೨೦೦೨ | ೨೬೬ | ೩೬೦ | ೯೯೫೯ | ೨೧೨೬೧೦೭ |
| ೫. | ೨೦೦೨-೨೦೦೩ | ೨೧ | ೩೧ | ೬೬೧೧ | ೯೯೧೬೬ |

## ಸಿವಿಲ್

### ೧. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೋಲಾರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೬೯೭ | ೫೫೧ | ೨೪೪೭೨ | ೫೧೭೬೮೮ |
| ೨ | ೧೯೯೯-೨೦೦೦ | ೧೦೮೩ | ೭೩೪ | ೧೨೮೭೩೦ | ೯೫೫೬೧೬೭ |
| ೩ | ೨೦೦೦-೨೦೦೧ | ೧೦೪೪ | ೧೦೫೮ | ೧೭೪೩೨೫ | ೪೦೫೮೯೩೨ |
| ೪ | ೨೦೦೧-೨೦೦೨ | ೧೦೩೬ | ೧೨೦೬ | ೩೩೪೨೧೬ | ೬೧೮೨೫೬೩ |
| ೫ | ೨೦೦೨-೨೦೦೩ | ೧೪೮೯ | ೨೭೫೪ | ೧೩೭೦೪೮ | ೭೬೫೮೯೯ |

### ೨. ಪ್ರಧಾನ ಸಿವಿಲ್ ನ್ಯಾಯಾಧೀಶರು (ಹಿ.ವಿ.) ಮತ್ತು ಸಿ.ಜೆ.ಎಂ. ನ್ಯಾಯಾಲಯ, ಕೋಲಾರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೧೬೬೮ | ೧೫೧ | ೧೨೦೫೫೨೫ | ೨೫೧೨೪೨೩ |
| ೨ | ೧೯೯೯-೨೦೦೦ | ೧೪೭೭ | ೧೦೯೧ | ೧೭೩೭೩೧೧ | ೨೫೩೮೫೭೩ |
| ೩ | ೨೦೦೦-೨೦೦೧ | ೧೫೮೦ | ೧೫೫೧ | ೩೬೨೪೪೨೬ | ೩೬೧೨೧೩೬ |
| ೪ | ೨೦೦೧-೨೦೦೨ | ೧೫೫೭ | ೧೫೮೦ | ೨೦೧೯೨೬ | ೩೦೦೯೨೬ |
| ೫ | ೨೦೦೨-೨೦೦೩ | ೨೫೮೭ | ೧೧೯ | ೨೧೬೬೦೯೮ | ೩೪೬೬೮೫೭ |

**೩. ಸಿವಿಲ್ ನ್ಯಾಯಾಧೀಶರು (ಹಿ.ವಿ.) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೆ.ಜಿ.ಎಫ್**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮–೧೯೯೯ | ೧೨೪೩ | ೭೭೩ | ೩೫೪೪೫೪ | ೨೧೩೬೮ |
| ೨ | ೧೯೯೯–೨೦೦೦ | ೯೭೧ | ೧೦೫೭ | ೯೬೦೮೫೨ | ೨೩೦೬ |
| ೩ | ೨೦೦೦–೨೦೦೧ | ೯೯೧ | ೬೬೯ | ೮೧೯೬೭ | ೬೬೨೧೬ |
| ೪ | ೨೦೦೧–೨೦೦೨ | ೯೭೬ | ೯೨೮ | ೬೧೧೯೧ | ೯೯೧೯ |
| ೫ | ೨೦೦೨–೨೦೦೩ | ೧೧೧೦ | ೬೯೨ | ೧೧೬೮೬೮ | ೧೧೯೯೭ |

**೪. ಸಿವಿಲ್ ನ್ಯಾಯಾಧೀಶರು (ಹಿ.ವಿ.) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಂತಾಮಣಿ**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮–೧೯೯೯ | ೨೮ | ೪೮೨ | ೮೯೭೭೩೪ | ೭೯೮೦ |
| ೨ | ೧೯೯೯–೨೦೦೦ | ೩೪೦೩ | ೬೧೮ | ೯೪೪೩೮೧ | ೩೧೮೧೫ |
| ೩ | ೨೦೦೦–೨೦೦೧ | ೧೮೦ | ೭೩೧ | ೫೩೬೧೩೧ | ೨೯೯೨ |
| ೪ | ೨೦೦೧–೨೦೦೨ | ೧೪೦ | ೪೯೭ | ೫೨೨೩೦೦ | ೬೨೪೭೫ |
| ೫ | ೨೦೦೨–೨೦೦೩ | ೧೭೨ | ೫೩೪ | ೭೯೫೬೪೨ | ೩೭೦೬೦ |

**೫. ಸಿವಿಲ್ ನ್ಯಾಯಾಧೀಶರು (ಹಿ.ವಿ.) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಕ್ಕಬಳ್ಳಾಪುರ**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮–೧೯೯೯ | ೮೬೦ | ೭೦೨ | ೮೭೩೪೨೩ | ೩೨೨೨೦ |
| ೨ | ೧೯೯೯–೨೦೦೦ | ೮೮೦ | ೪೯೩ | ೧೦೯೬೮೮೦ | ೭೫೭೫೨ |
| ೩ | ೨೦೦೦–೨೦೦೧ | ೮೨೦ | ೫೯ | ೧೦೫೬೧೧೩ | ೭೦೩೪೫ |
| ೪ | ೨೦೦೧–೨೦೦೨ | ೯೨೫ | ೧೫೯ | ೧೩೧೯೯೮ | ೪೪೬೫೦ |
| ೫ | ೨೦೦೨–೨೦೦೩ | ೧೪೩೪ | ೧೦೪೩ | ೧೫೯೬೩೦ | ೫೬೮೫೦ |

**೬. ಪ್ರಧಾನ ಸಿವಿಲ್ ನ್ಯಾಯಾಧೀಶರ (ಹಿ.ವಿ.) ಮತ್ತು ಸಿ.ಜೆ.ಎಂ. ನ್ಯಾಯಾಲಯ, ಕೋಲಾರ**

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮–೧೯೯೯ | ೨೫ | ೩೮೨ | ೧೭೦೧೬ | ೧೬೦೪೧೭ |
| ೨ | ೧೯೯೯–೨೦೦೦ | ೨೫೧ | ೨೫೧ | ೨೨೫೫೩ | ೧೬೦೪೧೭ |
| ೩ | ೨೦೦೦–೨೦೦೧ | ೨೯ | ೨೫ | ೨೯೯೯೫ | ೩೦೬೪೯೭ |
| ೪ | ೨೦೦೧–೨೦೦೨ | ೨೮ | ೫೯ | ೧೬೪೨೭೪ | ೫೮೫೧೩೦ |
| ೫ | ೨೦೦೨–೨೦೦೩ | ೩೦೨ | ೫೯೪ | ೨೫೮೮೪೬ | ೨೦೦೬೨೭ |

### ೭. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿ.ವಿ.) ಮತ್ತು ಜೆ.ಎಂ.ಎಫ್.ಸಿ : ಕೋಲಾರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೨೦೭ | ೧೭೦ | | |
| ೨ | ೧೯೯೯-೨೦೦೦ | ೨೦೪ | ೧೯೧ | ಪ್ರಧಾನ | |
| ೩ | ೨೦೦೦-೨೦೦೧ | ೨೩೬ | ೧೧೭ | ನ್ಯಾಯಾಲಯದಲ್ಲಿರುವಂತೆ | |
| ೪ | ೨೦೦೧-೨೦೦೨ | ೨೫೫ | ೧೨೮ | | |
| ೫ | ೨೦೦೨-೨೦೦೩ | ೨೬೧ | ೨೨೮ | | |

### ೮. ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಅಪರ ಜೆ.ಎಂ.ಎಫ್.ಸಿ. ಕೆ.ಜಿ.ಎಫ್

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೩೧೧ | ೧೦೫ | ೩೭೨೫೧೧ | ೫೮೩೭೯೫ |
| ೨ | ೧೯೯೯-೨೦೦೦ | ೩೮೬ | ೩೧೭ | ೨೧೭೦೪೨ | ೧೫೭೪೪೫೨ |
| ೩ | ೨೦೦೦-೨೦೦೧ | ೧೯೩ | ೧೬೫ | ೧೦೫೭೭೬೧ | ೧೯೫೮೩೭೯ |
| ೪ | ೨೦೦೧-೨೦೦೨ | ೨೦೮ | ೪೭೬ | ೩೧೬೮೦೧ | ೧೯೯೦೧೨ |
| ೫ | ೨೦೦೨-೨೦೦೩ | ೧೬೪ | ೩೫೫ | ೨೮೮೦೧೩ | ೧೩೮೧೩೧೪ |

### ೯. ೧ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿ.ಶ್ರೇಣಿ) ಮತ್ತು ಅಪರ ಜೆ.ಎಂ.ಎಫ್.ಸಿ. ಕೆ.ಜಿಎಫ್

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೨೯೭ | ೨೯೪ | ೩೭೨೫೧೧ | ೫೮೩೭೯೫ |
| ೨ | ೧೯೯೯-೨೦೦೦ | ೨೨೪ | ೩೮೪ | ೨೧೭೦೪೨ | ೧೫೭೪೪೫೨ |
| ೩ | ೨೦೦೦-೨೦೦೧ | ೨೯ | ೫೧೭ | ೧೦೫೭೭೬೧ | ೧೯೫೮೩೭೯ |
| ೪ | ೨೦೦೧-೨೦೦೨ | ೪೫೩ | ೪೯೭ | ೩೧೬೮೦೧ | ೧೯೯೦೧೨ |
| ೫ | ೨೦೦೨-೨೦೦೩ | ೨೫೮ | ೩೭೦ | ೨೮೮೦೧೩ | ೧೩೮೧೩೧೪ |

### ೧೦. ೨ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿ.ವಿ) ನ್ಯಾಯಾಲಯ, ಕೆ.ಜಿ.ಎಫ್

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೧೦೫ | ೪೨೦ | ೨೪೬೬೦೮ | ೧೨೫೮೦೬ |
| ೨ | ೧೯೯೯-೨೦೦೦ | ೨೫೦ | ೪೦೧ | ೩೭೨೫೧೧ | ೧೫೨೨೦೧ |
| ೩ | ೨೦೦೦-೨೦೦೧ | ೧೦೨ | ೩೪೩ | ೨೧೭೦೪೨ | ೨೨೪೦೯ |
| ೪ | ೨೦೦೧-೨೦೦೨ | ೨೦೭ | ೪೨೩ | ೨೯೧೯ | ೨೬೩೨೬೩ |
| ೫ | ೨೦೦೨-೨೦೦೩ | ೨೫೫ | ೪೭೪ | ೨೩೦೨೯೭ | ೨೧೦೦೯೭ |

### ೧೧. ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಚಿಂತಾಮಣಿ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೧೧೭ | ೨೪೫ | ೭೪೮೯ | ೪೩೪೫ |
| ೨ | ೧೯೯೯-೨೦೦೦ | ೧೮ | ೧೫೬ | ೫೮೪೯ | ೧೯೧೦ |
| ೩ | ೨೦೦೦-೨೦೦೧ | ೯೭ | ೧೦೩ | ೪೪೫೪೬ | ೧೮೭ |
| ೪ | ೨೦೦೧-೨೦೦೨ | ೮೩ | ೧೮೩ | ೫೯೫೮ | ೨೯೩ |
| ೫ | ೨೦೦೨-೨೦೦೩ | ೯೪ | ೧೬೧ | ೪೮೪೩೦ | ೨೧೪೩ |

### ೧೨. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಂತಾಮಣಿ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೧೧೭ | ೨೪೫ | ೭೪೮೯ | ೯೭೮ |
| ೨ | ೧೯೯೯-೨೦೦೦ | ೧೮ | ೧೫೬ | ೨೦೦೦ | ೯೯೮೦ |
| ೩ | ೨೦೦೦-೨೦೦೧ | ೯೭ | ೧೦೩ | ೪೩೦೦೦ | ೧೯೯೨ |
| ೪ | ೨೦೦೧-೨೦೦೨ | ೮೩ | ೧೮೩ | ೫೯೫೮ | ೨೦೬೫ |
| ೫ | ೨೦೦೨-೨೦೦೩ | ೯೪ | ೧೬೧ | ೪೮೪೩೦ | ೩೭೮ |

### ೧೩. ಪ್ರಧಾನ ಸಿವಿಲ್ ನ್ಯಾಯಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಕ್ಕಬಳ್ಳಾಪುರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೨೮೦ | ೪೦೭ | ೩೧೪೨೧೮ | ೧೬೮೯೨೬ |
| ೨ | ೧೯೯೯-೨೦೦೦ | ೧೯೩ | ೧೪೭ | ೨೪೪೬೩೨ | ೧೭೦೨೩೯ |
| ೩ | ೨೦೦೦-೨೦೦೧ | ೨೦೨ | ೧೩೩ | ೨೧೮೩೬೬ | ೨೨೩೨೪೭೩ |
| ೪ | ೨೦೦೧-೨೦೦೨ | ೧೪೭ | ೨೮೨ | ೨೯೯೨೯೧ | ೧೭೯೨೬ |
| ೫ | ೨೦೦೨-೨೦೦೩ | ೨೧೭ | ೩೩೩ | ೨೬೦೧೮೩ | ೯೭೨೪೩೪ |

### ೧೪. ಹೆಚ್ಚುವರಿ ಸಿವಿಲ್ ನ್ಯಾಯಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಕ್ಕಬಳ್ಳಾಪುರ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೩೧೭ | ೪೩೪ | | ೩೭೪೨೪೫ |
| ೨ | ೧೯೯೯-೨೦೦೦ | ೨೧೧ | ೧೧೦ | | ೫೩೨೩೧೫ |
| ೩ | ೨೦೦೦-೨೦೦೧ | ೧೮೫ | ೧೧೦ | | ೩೭೯೫೧೩ |
| ೪ | ೨೦೦೧-೨೦೦೨ | ೨೦೬ | ೨೦೬ | | ೫೦೪೧೪೮ |
| ೫ | ೨೦೦೨-೨೦೦೩ | ೨೧೫ | ೩೬ | | ೪೭೨೧೯೭ |

### ೧೫. ಪ್ರಧಾನ ಸಿವಿಲ್ ನ್ಯಾಯಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ಮಾಲೂರು

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೨೬ | ೫೪೬ | ೨೧೨೫೦೦ | ೨೨೪೫೦೦ |
| ೨ | ೧೯೯೯-೨೦೦೦ | ೨೩ | ೨೬ | ೩೨೭೬೫೦ | ೩೪೩೭೫೦ |
| ೩ | ೨೦೦೦-೨೦೦೧ | ೧೫೫ | ೩೩ | ೧೮೦೫೦೦ | ೨೧೩೫೦೦೦ |
| ೪ | ೨೦೦೧-೨೦೦೨ | ೨೦೧ | ೨೫ | ೨೧೫೩೦ | ೨೬೩೫೦೦ |
| ೫ | ೨೦೦೨-೨೦೦೩ | ೧೫೫ | ೯೦ | ೨೧೪೫೦೦ | ೨೪೪೯೦೦೦ |

### ೧೬. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು (ಕಿ.ವಿ) ನ್ಯಾಯಾಲಯ, ಶಿಡ್ಲಘಟ್ಟ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧ | ೧೯೯೮-೧೯೯೯ | ೨೮ | ೩೬೮ | | |
| ೨ | ೧೯೯೯-೨೦೦೦ | ೮೧೬ | ೩೩೧ | ಪ್ರಧಾನ | |
| ೩ | ೨೦೦೦-೨೦೦೧ | ೨೯ | ೫೯೫ | ನ್ಯಾಯಾಲಯದಲ್ಲಿರುವಂತೆ | |
| ೪ | ೨೦೦೧-೨೦೦೨ | ೧೩೦ | ೩೪೦ | | |
| ೫ | ೨೦೦೨-೨೦೦೩ | ೧೭ | ೩೦೩ | | |

### ೧೭. ಸಿವಿಲ್ ನ್ಯಾಯಾಧೀಶರು (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ಬಾಗೇಪಲ್ಲಿ

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೩೯ | ೩೪೭ | ೮೪,೭೩೨ | ೭,೧೭೬ |
| ೨. | ೧೯೯೯-೨೦೦೦ | ೨೭೭ | ೩೦೮ | ೮೭,೩೦೧ | ೫೭,೫೪ |
| ೩. | ೨೦೦೦-೨೦೦೧ | ೬೨ | ೪೯ | ೯೭,೯೬೮ | ೯,೭೯೧ |
| ೪. | ೨೦೦೧-೨೦೦೨ | ೨೯ | ೩೭೭ | ೩೫,೬೫೮ | ೪,೬೨೦ |
| ೫. | ೨೦೦೨-೨೦೦೩ | ೯೦ | ೧೬೪ | ೭೯,೪೮೯ | ೯,೨೨೦ |

### ೧೮. ಪ್ರಧಾನ ಸಿವಿಲ್ ನ್ಯಾಯಾಧೀಶರು (ಕಿ.ವಿ.) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗೌರಿಬಿದನೂರು.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೩೦೧ | ೬೨ | ೧,೦೮,೨೨೬ | ೨,೫೬,೯೯೨ |
| ೨. | ೧೯೯೯-೨೦೦೦ | ೫೨ | ೫೮೨ | ೧,೨೯,೩೮೨ | ೧೦,೪೦,೯೨೨ |
| ೩. | ೨೦೦೦-೨೦೦೧ | ೧೯೪ | ೩೫೮ | ೯೮,೨೨೭ | ೧೧,೪೨,೪೧೧ |
| ೪. | ೨೦೦೧-೨೦೦೨ | ೨೦೩ | ೩೦೧ | ೧,೦೩,೦೮೮ | ೧,೯೦,೪೭೨ |
| ೫. | ೨೦೦೨-೨೦೦೩ | ೧೯೬ | ೩೪೯ | ೧,೩೩,೪೬೬ | ೧,೨೪,೯೫೯ |

### ೧೯. ಹೆಚ್ಚುವರಿ ಸಿವಿಲ್ ನ್ಯಾಯಧೀಶರು (ಕಿ.ವಿ.) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಗೌರಿಬಿದನೂರು.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೨೭೮ | ೪೨೭ | ೫೯೦೬೧ | ೬೮೯೦೬೧ |
| ೨. | ೧೯೯೯-೨೦೦೦ | ೩೧೧ | ೨೬೦ | ೬೪೬೮೧ | ೫೯೦೬೧ |
| ೩. | ೨೦೦೦-೨೦೦೧ | ೧೫೬ | ೬೨ | ೪೯೧೧೩ | ೨೫೩೫೩೭ |
| ೪. | ೨೦೦೧-೨೦೦೨ | ೧೭೬ | ೩೧೧ | ೫೧೨೫೪ | ೨೫೩೫೩೭ |
| ೫ | ೨೦೦೨-೨೦೦೩ | ೧೮೨ | ೨೫೨ | ೬೬೭೩೩ | ೨೪೫೮೧೩ |

### ೨೦. ಸಿವಿಲ್ ನ್ಯಾಯಾಧೀಶರು (ಕಿ.ವಿ.) ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಡಿಬಂಡೆ.

| ಕ್ರ.ಸಂ | ವರ್ಷ | ದಾಖಲಾದ ದಾವೆಗಳು | ತೀರ್ಮಾನವಾದ ದಾವೆಗಳು | ಆಯ ರೂ. | ವ್ಯಯ ರೂ. |
|---|---|---|---|---|---|
| ೧. | ೧೯೯೮-೧೯೯೯ | ೭೪೨ | ೮ | ೪೪,೮೨೫ | ೩,೨೦,೧೨೩ |
| ೨. | ೧೯೯೯-೨೦೦೦ | ೨೬೩ | ೧೮೨ | ೮೦,೯೭೭ | ೧೩,೮೩,೦೫೦ |
| ೩. | ೨೦೦೦-೨೦೦೧ | ೨೪೩ | ೨೧೩ | ೪೪,೨೬೧ | ೧೬,೬೬,೫೬೬ |
| ೪. | ೨೦೦೧-೨೦೦೨ | ೨೧೬ | ೪೯೩ | ೧,೪೯,೫೭೯ | ೨೧,೨೬,೧೦೭ |
| ೫ | ೨೦೦೨-೨೦೦೩ | ೧೮೪ | ೩೫೭ | ೯೬,೧೧೧ | ೧೯,೧೯,೧೬೬ |

### ತ್ವರಿತ ವಿಲೇವಾರಿ ನ್ಯಾಯಾಲಯಗಳು: (ಫಾಸ್ಟ್ ಟ್ರ್ಯಾಕ್ ಕೋರ್ಟ್ಸ್)

ಹಲವಾರು ವರ್ಷಗಳಿಂದ ಇತ್ಯರ್ಥವಾಗದೆ ಉಳಿದಿರುವ ಕ್ರಿಮಿನಲ್ ಮೊಕದ್ದಮೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ, ಜನಸಾಮಾನ್ಯರಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ಪ್ರಾರಂಭವಾದ ಐದು ತ್ವರಿತ ವಿಲೇವಾರಿ ನ್ಯಾಯಾಲಯಗಳು ೨೦೦೩ರಿಂದ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ ಕೋಲಾರದಲ್ಲಿ ಮೊದಲ ಮತ್ತು ಎರಡನೆ ನ್ಯಾಯಾಲಯಗಳು ಮೇ೨೦೦೩ರಲ್ಲಿಯೂ, ಮೂರನೇ ಹಾಗೂ ನಾಲ್ಕನೇ ನ್ಯಾಯಾಲಯಗಳು ಮೇ ೨೦೦೪ರಲ್ಲಿಯೂ, ಐದನೇ ನ್ಯಾಯಾಲಯ ಚಿಕ್ಕಬಳ್ಳಾಪುರದಲ್ಲಿ ಮೇ ೨೦೦೪ರಲ್ಲಿಯೂ ಪ್ರಾರಂಭಿಸಲ್ಪಟ್ಟವು.

೨೦೦೪ರ ಅಂತ್ಯಕ್ಕೆ ಈ ನ್ಯಾಯಾಲಯಗಳಿಗೆ ವರ್ಗಾವಣೆಗೊಂಡ ಹಾಗೂ ಇತ್ಯರ್ಥವಾಗಿರುವ ಪ್ರಕರಣಗಳ ವಿವರಗಳನ್ನು ಮುಂದೆ ನೀಡಲಾಗಿದೆ.

| ನ್ಯಾಯಾಲಯಗಳ ಸಂಖ್ಯೆ, ಸ್ಥಳ | ವರ್ಗಾಯಿತ ಪ್ರಕರಣಗಳು | ಇತ್ಯರ್ಥವಾದ ಪ್ರಕರಣಗಳು |
|---|---|---|
| ೧. ಕೋಲಾರ | ೩೦೦ | ೨೫೭ |
| ೨. ಕೋಲಾರ | ೩೫೦ | ೨೨೭ |
| ೩. ಕೋಲಾರ | ೨೦೬ | ೧೧೧ |
| ೪. ಕೋಲಾರ | ೧೫೬ | ೧೧೨ |
| ೫. ಚಿಕ್ಕಬಳ್ಳಾಪುರ | ೧೫೬ | ಕಾರ್ಯಗತವಾಗಿಲ್ಲ |

**ಕಾನೂನು ಸೇವೆಗಳ ಪ್ರಾಧಿಕಾರ:**

ಸಾಮಾನ್ಯ ಜನರಲ್ಲಿ ಕಾನೂನಿನ ಬಗ್ಗೆ ಅರಿವು ಮೂಡಿಸುವುದು, ಉಚಿತ ಕಾನೂನು ಸಲಹೆ ಹಾಗೂ ನೆರವು ಒದಗಿಸುವುದು, ಜನತಾ ನ್ಯಾಯಾಲಯ (ಲೋಕ್ ಅದಾಲತ್)ಗಳ ಮೂಲಕ ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಜನರಿಗೆ ತ್ವರಿತವಾಗಿ ಹಾಗೂ ಕಡಿಮೆ ಖರ್ಚಿನಲ್ಲಿ ನ್ಯಾಯ ದೊರಕಿಸಿಕೊಡುವ ಉದ್ದೇಶಗಳಿಂದ ಮೇಲ್ಕಂಡ ಪ್ರಾಧಿಕಾರ ಸ್ಥಾಪನೆಗೊಂಡಿದೆ. ವಾರ್ಷಿಕ ಆದಾಯ ೨೫ ಸಾವಿರಕ್ಕಿಂತ ಕಡಿಮೆ ಇರುವ ಎಲ್ಲಾ ವರ್ಗಗಳ, ಜಾತಿಗಳವರಿಗೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ, ಮಾನಸಿಕ ಮತ್ತು ದೈಹಿಕ ನ್ಯೂನತೆಗಳನ್ನು ಹೊಂದಿದವರಿಗೆ, ಮಹಿಳೆಯರಿಗೆ ಹಾಗೂ ಮಕ್ಕಳಿಗೆ, ಪ್ರಕೃತಿ ವಿಕೋಪಗಳಿಗೆ ತುತ್ತಾದವರಿಗೆ, ರಕ್ಷಣಾಗೃಹ, ಮಾನಸಿಕ ಆಸ್ಪತ್ರೆಗಳ ಅಭಿರಕ್ಷೆಯಲ್ಲಿರುವವರಿಗೆ, ಕಾರ್ಖಾನೆ ಕಾರ್ಮಿಕರಿಗೆ, ಮತೀಯದೌರ್ಜನ್ಯಕ್ಕೆ ಒಳಗಾದವರಿಗೆ, ದೈಹಿಕ ವ್ಯಾಪಾರಿಗಳಿಗೆ ಹಾಗೂ ಜೀತದಾಳುಗಳಿಗೆ ಈ ಪ್ರಾಧಿಕಾರ ನೆರವು ನೀಡುತ್ತದೆ. ಇದರಡಿ ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲರ ಶುಲ್ಕ ಸೇರಿದಂತೆ ಸಂಪೂರ್ಣ ಖರ್ಚನ್ನು ಕೆಳಹಂತದ ನ್ಯಾಯಾಲಯಗಳಿಂದ ಸರ್ವೋಚ್ಚ ನ್ಯಾಯಾಲಯದವರೆಗೆ ಹಾಗೂ ವಿವಿಧ ಕಚೇರಿಗಳ ಪ್ರಕರಣಗಳಿಗೆ ಸಂಬಂಧಿಸಿದಂತೆಯೂ ಪ್ರಾಧಿಕಾರ ನೀಡುತ್ತದೆ.

ಈ ಪ್ರಾಧಿಕಾರವು ಕೋಲಾರದಲ್ಲಿ ೧೯೮೭ರಿಂದ ಕರ್ನಾಟಕದ ಪ್ರಾಧಿಕಾರದಡಿ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಸತ್ರ ನ್ಯಾಯಾಧೀಶರು ಅಧ್ಯಕ್ಷರಾಗಿರುವ ಹಾಗೂ ಜಿಲ್ಲಾ ಮುಖ್ಯ ಸಿವಿಲ್ ನ್ಯಾಯಾಧೀಶ ಮತ್ತು ಸಿ.ಜೆ.ಎಂ. ಅವರು ಸದಸ್ಯ ಕಾರ್ಯದರ್ಶಿಯಾಗಿರುವ ಈ ಸಂಸ್ಥೆ, 'ತಾಲೂಕು ಕಾನೂನು ಸೇವಾ ಸಂಸ್ಥೆ' ಎಂಬ ಪದನಾಮದಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ತಾಲೂಕು ಮಟ್ಟದಲ್ಲಿ ಸೀನಿಯರ್ ಡಿವಿಷನ್ ಸಿವಿಲ್ ನ್ಯಾಯಾಧೀಶರು ಇದಕ್ಕೆ ಅಧ್ಯಕ್ಷರಾಗಿಯೂ, ಎಲ್ಲಾ ಜೂನಿಯರ್ ಡಿವಿಷನ್ ಸಿವಿಲ್ ನ್ಯಾಯಾಧೀಶರು ಸದಸ್ಯರಾಗಿಯೂ ಕಾರ್ಯನಿರ್ವಹಿಸುತ್ತಾರೆ. ರಾಜಿ ಸಂಧಾನದ ಮೂಲಕ ಪ್ರಕರಣಗಳ ಇತ್ಯರ್ಥ, ಹಳ್ಳಿಹಳ್ಳಿಗೆ ಕಾನೂನು ವಿದ್ಯಾ ಪ್ರಸಾರ, ಪುಸ್ತಿಕೆಗಳ ಮೂಲಕ ಜನರಲ್ಲಿ ಕಾನೂನು ಅರಿವು ಮೂಡಿಸುವುದು – ಇವು ಪ್ರಾಧಿಕಾರದ ಇತರ ಧ್ಯೇಯೋದ್ದೇಶಗಳಾಗಿವೆ.

**ನ್ಯಾಡಾಳಿತದ ಖ್ಯಾತನಾಮರು**

ಆಡಳಿತ ಹಾಗೂ ಪೊಲೀಸ್ ಇಲಾಖೆಗಳಿಗೆ ಖ್ಯಾತಿವೆತ್ತ ಅಧಿಕಾರಿಗಳನ್ನು ನೀಡಿರುವ ಕೋಲಾರ ಜಿಲ್ಲೆ ನ್ಯಾಯಾಡಳಿತ ಕ್ಷೇತ್ರಕ್ಕೂ ತನ್ನ ಉತ್ತಮ ಕೊಡುಗೆ ನೀಡಿದೆ. ಕರ್ನಾಟಕದ ಪ್ರಥಮ ಮುಖ್ಯಮಂತ್ರಿಯಾಗಿದ್ದ ಕೆ.ಸಿ. ರೆಡ್ಡಿಯವರು ಬಂಗಾರಪೇಟೆ ತಾಲ್ಲೂಕಿನ ಕ್ಯಾಸಂಬಳ್ಳಿಯವರು. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಮತ್ತು ಹಾಲಿ ಲೋಕಾಯುಕ್ತರಾದ ಜಸ್ಟಿಸ್ ಎಂ.ಎನ್. ವೆಂಕಟಾಚಲ ಮುಳಬಾಗಿಲು ತಾಲ್ಲೂಕಿನ ಊರ್ಕುಂಟೆ ಮಿಟ್ಟೂರಿನವರು. ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಜಸ್ಟಿಸ್ ರಾಜೇಂದ್ರ ಬಾಬು ಶ್ರೀನಿವಾಸಪುರ ತಾಲ್ಲೂಕಿನ ರೋಣೂರಿಗೆ ಸೇರಿದವರು. ಕರ್ನಾಟಕ ಬಾರ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷರೂ, ಹಾಲಿ ಶಾಸಕ ಶ್ರೀ ಕೆ.ಎನ್. ಸುಬ್ಬಾರೆಡ್ಡಿ, ಶಿಡ್ಲಘಟ್ಟ ತಾಲ್ಲೂಕಿನ ಕೊತ್ತನೂರಿನವರಾದರೆ, ಅಡ್ವೋಕೇಟ್ ಜನರಲ್ ಆರ್.ಎನ್. ಬೈರಾರೆಡ್ಡಿಯವರು ಶ್ರೀನಿವಾಸಪುರ ತಾಲ್ಲೂಕಿನವರು. ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಗೋಪಾಲಗೌಡರವರು ಇದೇ ಜಿಲ್ಲೆಯವರೇ.

**ಬಾರ್ ಅಸೋಸಿಯೇಷನ್, ಕೋಲಾರ**

ಸ್ವಾತಂತ್ರ್ಯಾನಂತರ ಕೇವಲ ಇಪ್ಪತ್ತು ಮಂದಿ ನೋಂದಾಯಿತ ವಕೀಲರೊಂದಿಗೆ ಪ್ರಾರಂಭವಾದ ಜಿಲ್ಲಾ ಬಾರ್ ಅಸೋಸಿಯೇಷನ್ ೨೦೦೫ ರ ಮಾರ್ಚ್ ಅಂತ್ಯಕ್ಕೆ ಸುಮಾರು ೪೭೫ ಮಂದಿ ನೋಂದಾಯಿತ ವಕೀಲರನ್ನು ಹೊಂದಿದ್ದಿತು. ಇದರಲ್ಲಿ ಶೇ ೧೫% ಮಹಿಳೆಯರಾಗಿದ್ದರು.

# ಪೊಲೀಸ್ ಆಡಳಿತ

**ಐತಿಹಾಸಿಕ ಹಿನ್ನಲೆ :** ಗ್ರಾಮೀಣ ಪೊಲೀಸ್ ವ್ಯವಸ್ಥೆಯಡಿ ಜಿಲ್ಲೆಯ ಪೊಲೀಸರ ಕರ್ತವ್ಯಗಳನ್ನು ಮೊದಲಿಗೆ ಗ್ರಾಮ ಸೇವಕರಾದ ತೋಟಿ, ತಳವಾರರು, ನೀರಗಂಟಿಗಳು ಹಾಗೂ ಕಾವಲುಗಾರರು ನಿರ್ವಹಿಸುತ್ತಿದ್ದರು. ಇವರು ಸಾರ್ವಜನಿಕರ ಆಸ್ತಿಪಾಸ್ತಿಗಳಿಗೂ ಅವರ ಜೀವಕ್ಕೂ ರಕ್ಷಣೆ ಒದಗಿಸುತ್ತಿದ್ದರೆಂದು ೧೮೩೮ರ ಸರ್. ಮಾರ್ಕ್ ಕಬ್ಬನ್‌ರ ವರದಿ ತಿಳಿಸುತ್ತದೆ. ಹೈದರ್ ಅಲಿ ಹಾಗೂ ಟಿಪ್ಪು ಸುಲ್ತಾನರ ಕಾಲದಲ್ಲಿ ಮತ್ತು ದಿವಾನ್ ಪೂರ್ಣಯ್ಯನವರ ಕಾಲದಲ್ಲಿಯೂ ಈ ವ್ಯವಸ್ಥೆಯೇ ಮುಂದುವರೆಯಿತೆಂದು ತಿಳಿದುಬರುತ್ತದೆ. ತದನಂತರದಲ್ಲಿ ಜಾರಿಯಾದ ಕಂದಚಾರ್ ವ್ಯವಸ್ಥೆಯಡಿ ಸಿಪಾಯಿಗಳಿಗೆ ಮೇಲ್ಕಂಡ ಕರ್ತವ್ಯಗಳನ್ನು ವಹಿಸಲಾಯಿತು. ಈ ಸಿಪಾಯಿಗಳನ್ನು ೧೮೩೪ರಲ್ಲಿ ಅಧಿಕೃತ ಪೊಲಿಸರೆಂದು ಪರಿಗಣಿಸಲಾಯಿತು. ಗ್ರಾಮೀಣರಲ್ಲಿ ಶಾಂತಿ, ಶಿಸ್ತು ಪಾಲನೆ ಮೂಡಿಸುವ ಹಾಗೂ ಅವರಿಗೆ ರಕ್ಷಣೆ ಒದಗಿಸುವ ಸಂಪೂರ್ಣ ಜವಾಬ್ದಾರಿಯನ್ನು ಇವರಿಗೆ ವಹಿಸಲಾಯಿತು. ಇವರೊಂದಿಗೆ ಸರ್ಕಾರಿ ಸಿಬ್ಬಂದಿಯ ಸೇವೆಯನ್ನೂ ಪಡೆದು, ಅವರಿಗೆ ಪ್ರಮುಖ ಕರ್ತವ್ಯಗಳಾದ ಹಣದ ರಕ್ಷಣೆ, ಜೈಲುಗಳ ಪಹರೆ ಮುಂತಾದವುಗಳನ್ನು ವಹಿಸಲಾಯಿತು. ೧೮೫೬ರಲ್ಲಿ ಪ್ರತ್ಯೇಕ ಜುಡಿಷಿಯಲ್ ಕಮೀಷನರ್‌ರ ನೇಮಕವಾಗಿ ಅವರನ್ನು ಪದನಿಮಿತ್ತ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಎಂದು ಕರೆಯಲಾಯಿತು. ೧೮೬೬ರಲ್ಲಿ ಜಾರಿಯಾದ ೧೮೬೧ರ ಮದರಾಸ್ ಪೊಲೀಸ್ ಕಾಯ್ದೆ ಐದು ಪೊಲೀಸ್ ಇಲಾಖೆಯ ಮೊಟ್ಟ ಮೊದಲ ಸುಧಾರಣೆಯಾಯಿತು. ಇದನ್ನು ಪ್ರಾರಂಭದಲ್ಲಿ ಮದರಾಸ್ ಪೊಲೀಸ್ ಅಧಿಕಾರಿಯ ಆಡಳಿತದಡಿ ಬೆಂಗಳೂರು ಜಿಲ್ಲೆಗೆ ಮಾತ್ರ ಅನ್ವಯಿಸುವಂತೆ ಜಾರಿಮಾಡಿ, ನಂತರದಲ್ಲಿ ರಾಜ್ಯದ ಇತರೆಡೆಗಳಿಗೂ ಅನ್ವಯಿಸಲಾಯಿತು. ಆ ಸಮಯದಲ್ಲಿ ಹೊಸ ವ್ಯವಸ್ಥೆಯಲ್ಲಿ ಕಂಡುಬಂದ ನ್ಯೂನತೆಗಳನ್ನು ಸರಿಪಡಿಸುವ ಹಾಗೂ ಪೊಲೀಸ್ ಇಲಾಖೆಯನ್ನು ಪುನರ್ ರೂಪಿಸುವ ಜವಾಬ್ದಾರಿಯನ್ನು ಆಗಿನ ಜ್ಯುಡಿಷಿಯಲ್ ಕಮಿಷನರಾಗಿದ್ದ ಮ್ಯಾಂಗಲ್ಸ್ ಅವರಿಗೆ ನೀಡಲಾಯಿತು. ಇವರು ಕಂದಚಾರ್ ಸಿಪಾಯಿ ವ್ಯವಸ್ಥೆಯನ್ನು ರದ್ದುಮಾಡಿ, ನಿರ್ದಿಷ್ಟ ಕರ್ತವ್ಯಗಳನ್ನು ಹೊಂದಿದ ಹೊಸ ಕಾನ್ಸ್‌ಟೇಬಲ್‌ಗಳನ್ನು ಇಲಾಖೆಗೆ ನೇಮಿಸಿದರು. ಇಲಾಖೆಯ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪೊಲೀಸ್ ಸಿಬ್ಬಂದಿಗೆ ತಂತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಮನವರಿಕೆ ಮಾಡಿಕೊಡಲಾಯಿತು. ಇವರಿಗೆ ಹಲವು ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡುವುದನ್ನು ಕಡ್ಡಾಯಗೊಳಿಸಲಾಯಿತು. ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಯಾಗಿ ಡೆಪ್ಯುಟಿ ಕಮಿಷನರ್‌ಅನ್ನು, ಅವರಿಗೆ ಸಹಾಯಕರಾಗಿ ಅಸಿಸ್ಟೆಂಟ್ ಕಮಿಷನರ್‌ಗಳನ್ನು ೧೮೭೪ರಲ್ಲಿ ನೇಮಿಸಲಾಯಿತು. ೧೮೭೩ರಲ್ಲಿ ನಿರ್ಮಿಸಲಾದ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಹುದ್ದೆ ೧೮೭೯ರಲ್ಲಿ ರದ್ದಾಗಿ, ಇವರ ಕಾರ್ಯವನ್ನು ಚೀಫ್ ಕಮಿಷನರ್ ಕಚೇರಿಯ ಸಾಮಾನ್ಯ ಶಾಖೆ ನಿರ್ವಹಿಸುತ್ತಿತ್ತು. ಜ್ಯುಡಿಷಿಯಲ್ ಕಮಿಷನರ್ ಹೊಂದಿದ್ದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಅವರ ಅಧಿಕಾರವನ್ನು ೧೮೭೯ರಲ್ಲಿ ಚೀಫ್ ಕಮಿಷನರಿಗೆ ಹಸ್ತಾಂತರಗೊಳಿಸಲಾಯಿತು. ೧೮೮೦ರಲ್ಲಿ ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ಹುದ್ದೆ ರದ್ದಾಯಿತು. ತಾಲೂಕು ಅಮಲ್ದಾರರಿಗೆ ತಂತಮ್ಮ ವ್ಯಾಪ್ತಿಯ ಪ್ರದೇಶಗಳಲ್ಲಿ ಪೊಲೀಸ್ ಇಲಾಖೆಯ ನಿರ್ವಹಣಾ ಜವಾಬ್ದಾರಿಯನ್ನು ನೀಡಲಾಯಿತು.

**೧೮೮೧ರ ನಂತರ :** ೧೮೮೧ರಲ್ಲಿ ರಾಜ್ಯ ಹಸ್ತಾಂತರವಾದಾಗ, ಇಡೀ ಪೊಲೀಸ್ ವ್ಯವಸ್ಥೆ ದಿವಾನರ ಆಡಳಿತದಲ್ಲಿ ಕಾರ್ಯನಿರ್ವಹಿಸುತ್ತಿದ್ದಿತು. ೧೮೮೫ರಲ್ಲಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಹುದ್ದೆ ನಿರ್ಮಾಣವಾಯಿತು. ಇವರು ಅರಣ್ಯ ಹಾಗೂ ಪ್ಲಾಂಟೇಷನ್‌ಗಳ ಇನ್ಸ್‌ಪೆಕ್ಟರ್ ಜನರಲ್ ಹಾಗೂ ಕೃಷಿ ಮತ್ತು ಸಂಖ್ಯಾ ಇಲಾಖೆಗಳ ನಿರ್ದೇಶಕರ ಹುದ್ದೆಗಳನ್ನೂ ನಿರ್ವಹಿಸುತ್ತಿದ್ದರು. ಇವರ ಸಹಾಯಕ್ಕಾಗಿ ಜಿಲ್ಲೆಗೊಬ್ಬರಂತೆ ಪೊಲೀಸ್ ಅಸಿಸ್ಟೆಂಟ್ ಕಮಿಷನರ್ ನೇಮಕಗೊಂಡರು. ತಾಲೂಕು ಮಟ್ಟದಲ್ಲಿ ಅಮಲ್ದಾರರು ಮತ್ತು ಉಪ ತಾಲೂಕು ಮಟ್ಟದಲ್ಲಿ ಡೆಪ್ಯುಟಿ ಅಮಲ್ದಾರರು ಮುಖ್ಯಸ್ಥರಾಗಿದ್ದು, ಇವರಿಗೆ ಕ್ರಮವಾಗಿ ಇನ್ಸ್‌ಪೆಕ್ಟರ್ ಹಾಗೂ ಜಮೇದಾರರು ಸಹಾಯಕರಾಗಿದ್ದರು. ೧೮೯೧ರಲ್ಲಿ ಪೊಲೀಸ್ ಇಲಾಖೆ ಪುನರ್ಘಟನೆಗೊಂಡು ಒಬ್ಬ ಪೂರ್ಣಾವಧಿಯ ಇನ್ಸ್‌ಪೆಕ್ಟರ್ ಜನರಲ್‌ರ ಆಡಳಿತಕ್ಕೊಳಪಟ್ಟಿತು. ಇದೇ ಸಮಯಕ್ಕೆ ಅಸಿಸ್ಟೆಂಟ್ ಕಮಿಷನರ್ ಹುದ್ದೆ ರದ್ದುಗೊಳಿಸಲ್ಪಟ್ಟು, ಅದಕ್ಕೆ ಬದಲಾಗಿ ಸೂಪರಿಂಟೆಂಡೆಂಟ್ ಹಾಗೂ ಡೆಪ್ಯುಟಿ ಸೂಪರಿಂಟೆಂಡೆಂಟ್‌ಗಳು ನೇಮಕಗೊಂಡರು.

ಈ ಶತಮಾನದ ಆರಂಭದಲ್ಲಿ ಕೋಲಾರ ಜಿಲ್ಲೆಯಲ್ಲಿ ಪೊಲೀಸ್ ಆಡಳಿತದಲ್ಲಿ ಗ್ರಾಮ ಪೊಲೀಸರು ಹಾಗೂ ಖಾಯಂ (ರೆಗ್ಯುಲರ್) ಪೊಲಿಸರು ಎಂಬ ಎರಡು ವಿಭಾಗಗಳಿದ್ದವು. ಕ್ರೈಂ ಪ್ರಕರಣಗಳನ್ನು ಪತ್ತೆಹಚ್ಚಿ ಅವುಗಳನ್ನು ಖಾಯಂ ಪೊಲೀಸಿನವರಿಗೆ ವರದಿ ಮಾಡುವ ಅಧಿಕಾರವನ್ನು ಪಟೇಲರು, ತೋಟಿ ಹಾಗೂ ತಳವಾರರು ಹೊಂದಿದ್ದರು. ೧೯೦೧ರಲ್ಲಿ ಗ್ರಾಮ ಪೊಲಿಸರಿಗೆ ಸಮವಸ್ತ್ರ ನೀಡಲಾಯಿತು. ಖಾಯಂ ಪೊಲೀಸ್ ವಿಭಾಗದಲ್ಲಿ ಪೇದೆ ಹಾಗೂ ಅಧಿಕಾರಿಗಳನ್ನು ೧೯೦೮ರ ಪೊಲೀಸ್ ರೆಗ್ಯುಲೇಷನ್ ಐದರಂತೆ ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಜಿಲ್ಲೆಯಲ್ಲಿ ಜಿಲ್ಲಾ ಪೊಲೀಸ್, ರೈಲ್ವೆ ಪೊಲೀಸ್ ಹಾಗೂ ಕೋಲಾರ ಗೋಲ್ಡ್‌ಫೀಲ್ಡ್ ಫೋರ್ಸ್‌ಗಳು ಎಂಬ ಮೂರು ಪ್ರಮುಖ ವಿಭಾಗಗಳು ಕಾರ್ಯ ನಿರ್ವಹಿಸುತ್ತಿದ್ದವು. ಗಣಿ ಪ್ರದೇಶದಲ್ಲಿ ಶಾಂತಿಪಾಲನೆಗಾಗಿ ಮೇಲೆ ಹೇಳಿದ ಮೂರನೇ ವಿಭಾಗ ವಿಶೇಷ ತರಬೇತಿ ಹೊಂದಿದ್ದು, ಜಿಲ್ಲಾ ಪೊಲಿಸರಿಗಿಂತ ತನ್ನ ಕಾರ್ಯವ್ಯಾಪ್ತಿ ನಿರ್ವಹಣೆಗಳಲ್ಲಿ ವಿಭಿನ್ನವಾಗಿದ್ದಿತು. ಇದರಡಿ ಚಿನ್ನದ ಗಣಿ ಪ್ರದೇಶಪಾಲನೆಗಾಗಿಯೇ ಒಂದು ಬೇಹುಗಾರಿಕೆ ದಳವಿದ್ದು, ಇಡೀ ವಿಭಾಗವನ್ನು ಒಬ್ಬ ಸೂಪರಿಂಟೆಂಡರು ನಿರ್ವಹಿಸುತ್ತಿದ್ದರು.

ಜಿಲ್ಲೆಯ ಪ್ರಪ್ರಥಮ ಪೋಲಿಸ್ ಠಾಣೆ ಕೆ.ಜಿ.ಎಫ್.ನ ಮಾರಿಕುಪ್ಪಂನ ಸ್ಥಾಪಿಸಲ್ಪಟ್ಟಿತು. ಇದೇ ಕಟ್ಟಡದಲ್ಲಿ ಒಂದು ಪೋಲಿಸ್ ಠಾಣೆ ಇಂದಿಗೂ ಕಾರ್ಯನಿರತವಾಗಿದೆ.

ಜಿಲ್ಲೆಯ ಪೊಲೀಸ್ ವ್ಯವಸ್ಥೆಯು ೧೯೧೮ರಲ್ಲಿ ಪ್ರಕಟಗೊಂಡ ಮೈಸೂರು ಪೊಲೀಸ್ ಮ್ಯಾನ್ಯುಯಲ್‌ನಂತೆ ಕಾರ್ಯನಿರ್ವಹಿಸುತ್ತಿತ್ತು. ೧೯೫೬ರಲ್ಲಿ ರಾಜ್ಯ ಪುನರ್ವಿಂಗಡಣೆಯಾದಾಗ ಪೊಲೀಸ್ ಆಡಳಿತವು ವಿವಿಧ ಪ್ರದೇಶಗಳಲ್ಲಿ ವಿವಿಧ ಕಾಯ್ದೆಗಳಡಿ ಕಾರ್ಯನಿರ್ವಹಿಸುತ್ತಿತ್ತು. ಈ ಆಡಳಿತಕ್ಕೆ ಒಂದು ಏಕರೂಪತೆ ನೀಡುವ ಉದ್ದೇಶದಿಂದ ಮೈಸೂರು ಪೊಲೀಸ್ ಕಾಯ್ದೆ ೧೯೬೩(ಮೈಸೂರು ಕಾಯ್ದೆ ೪, ೧೯೬೪) ಜಾರಿಯಾಗಿ ೨ನೇ ಏಪ್ರಿಲ್ ೧೯೬೫ರಲ್ಲಿ ರಾಜ್ಯಾದ್ಯಂತ ಕಾರ್ಯರೂಪಕ್ಕೆ ಬಂದಿತು. ಪ್ರಸ್ತುತ (೨೦೦೩-೦೪) ವ್ಯವಸ್ಥೆಯಲ್ಲಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಹುದ್ದೆಯ ಐ.ಪಿ.ಎಸ್. ಅಧಿಕಾರಿಯು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದು, ಅವರ ಸಹಾಯಕ್ಕೆ ಈ ಕೆಳಕಂಡ ಅಧಿಕಾರವರ್ಗ ಕಾರ್ಯನಿರತವಾಗಿದೆ. ಅಡಿಷಿನಲ್ ಎಸ್.ಪಿ. ಒಂದು, ಡಿವೈಎಸ್‌ಪಿ ಒಂದು, ಸರ್ಕಲ್ ಇನ್ಸ್‌ಪೆಕ್ಟರುಗಳು ೧೫, ಸಬ್ ಇನ್ಸ್‌ಪೆಕ್ಟರುಗಳು ೩೯, ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರುಗಳು ೭೦, ಹೆಡ್ ಕಾನ್ಸ್‌ಟೇಬಲ್‌ಗಳು ೨೭೦, ಕಾನ್ಸ್‌ಟೇಬಲ್‌ಗಳು ೮೪೧, ಮಹಿಳಾ ಹೆಡ್‌ಕಾನ್ಸ್‌ಟೇಬಲ್‌ಗಳು ೦೮ ಹಾಗೂ ಮಹಿಳಾ ಕಾನ್ಸ್‌ಟೇಬಲ್‌ಗಳು ೩೩. ಇವರಲ್ಲದೆ, ಆಡಳಿತಾತ್ಮಕ ವಿಭಾಗದಲ್ಲಿ ಒಬ್ಬರು ಸಹಾಯಕ ಆಡಳಿತಾಧಿಕಾರಿ, ಮೂರು ಕಚೇರಿ ಸೂಪರಿಂಟೆಂಡೆಟ್‌ರು, ಹತ್ತು ಪ್ರಥಮ ದರ್ಜೆ ಸಹಾಯಕರು, ಎಂಟು ದ್ವಿತೀಯ ದರ್ಜೆ ಸಹಾಯಕರು, ಐದು ಬೆರಳಚ್ಚುಗಾರರು, ಇಬ್ಬರು ಶೀಘ್ರಲಿಪಿಗಾರರು, ಐದು ಮಂದಿ ಡಿ ವರ್ಗದವರು ಹಾಗೂ ಏಳು ಮಂದಿ ಕಸಗುಡಿಸುವವರು ಕಾರ್ಯನಿರ್ವಹಿಸುತ್ತಿದ್ದರು.

ಕೋಲಾರದ ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆಯೂ ಒಬ್ಬ ಜಿಲ್ಲಾ ವರಿಷ್ಠಾಧಿಕಾರಿಯಡಿ ಕಾರ್ಯನಿರ್ವಹಿಸುತ್ತಿದ್ದು, ಇವರ ಸಹಾಯಕ್ಕಾಗಿ ಇಬ್ಬರು ರಿಜರ್ವ್ ಇನ್ಸ್‌ಪೆಕ್ಟರುಗಳು, ಐದು ಮಂದಿ ಸಬ್ ಇನ್ಸ್‌ಪೆಕ್ಟರುಗಳು, ಎಂಟು ಅಸಿಸ್ಟೆಂಟ್ ರಿಜರ್ವ್ ಸಬ್‌ಇನ್ಸ್‌ಪೆಕ್ಟರುಗಳು, ೪೪ ರಿಜರ್ವ್ ಹೆಡ್‌ಕಾನ್ಸ್‌ಟೇಬಲ್‌ಗಳು ಮತ್ತು ೨೦೫ ಮಂದಿ ಕಾನ್ಸ್‌ಟೇಬಲ್‌ಗಳು ಕಾರ್ಯನಿರ್ವಹಿಸುತ್ತಿದ್ದರು.

ಇಲಾಖೆಯ ಬೆನ್ನೆಲುಬಾಗಿರುವ ಪೊಲೀಸ್ ರೇಡಿಯೋ ಜಾಲವು ಒಬ್ಬ ಇನ್ಸ್‌ಪೆಕ್ಟರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರ ಸಹಾಯಕ್ಕಾಗಿ ನಾಲ್ವರು ಎಸ್.ಐ.ಗಳು, ಎಂಟು ಮಂದಿ ಎ.ಎಸ್.ಐ.ಗಳು, ೧೩ ಹೆಡ್‌ಕಾನ್ಸ್‌ಟೇಬಲ್‌ಗಳು ಮತ್ತು ಒಂಬತ್ತು ಮಂದಿ ಕಾನ್ಸ್‌ಟೇಬಲ್‌ಗಳು ಇರುತ್ತಾರೆ.

**ಲೋಕಾಯುಕ್ತ ಕಚೇರಿ, ಕೋಲಾರ**

ಈ ಕಾರ್ಯಾಲಯವು ೧೯೮೦ರಲ್ಲಿ ಒಬ್ಬ ಇನ್ಸ್‌ಪೆಕ್ಟರ್, ಒಬ್ಬ ಮುಖ್ಯಪೇದೆ ಹಾಗೂ ಒಬ್ಬ ಪೇದೆಯೊಂದಿಗೆ ಕೋಲಾರದಲ್ಲಿ ಪ್ರಾರಂಭಗೊಂಡು ಪ್ರಸ್ತುತ ಒಬ್ಬ ಸೂಪರಿಂಟೆಂಡರು, ಒಬ್ಬ ಇನ್ಸ್‌ಪೆಕ್ಟರು, ಇಬ್ಬರು ಮುಖ್ಯಪೇದೆಗಳು ಇಬ್ಬರು ಪೇದೆಗಳ ಆಡಳಿತದಡಿ ಕಾರ್ಯನಿರ್ವಹಿಸುತ್ತಿದೆ. ಕೆ.ಜಿ.ಎಫ್. ಪ್ರಾಂತದ ಆಡಳಿತಾಧಿಕಾರವನ್ನೂ ಹೊಂದಿರುವ ಈ ಕಚೇರಿಯಲ್ಲಿ

೧೯೮೧ರಲ್ಲಿ ನಾಲ್ಕು, ೮೨ರಲ್ಲಿ ನಾಲ್ಕು, ೮೩ರಲ್ಲಿ ನಾಲ್ಕು, ೯೯ರಲ್ಲಿ ೧೭, ೨೦೦೦ರಲ್ಲಿ ೧೨, ೨೦೦೧ರಲ್ಲಿ ೧೦, ೨೦೦೨ರಲ್ಲಿ ಏಳು, ೨೦೦೩ರಲ್ಲಿ ಆರು ಹಾಗೂ ೨೦೦೪ರಲ್ಲಿ ಮೂರು ಪ್ರಕರಣಗಳು ದಾಖಲಾಗಿರುತ್ತವೆ. ಈ ಸಂಬಂಧ ವ್ಯಕ್ತಿಗಳನ್ನು ಸೆರೆ ಹಿಡಿಯಲು ಜಿಲ್ಲಾ ಸೂಪರಿಂಟೆಂಡರಿಂದಲೂ ಮನೆ ಹಾಗೂ ಅಂಗಡಿಗಳ ಮೇಲೆ ಧಾಳಿ ಮಾಡಲು ಕೇಂದ್ರಕಚೇರಿಯ ಐ.ಜಿ. ಯವರಿಂದಲೂ ಅನುಮತಿ ಪಡೆದು ಕಾರ್ಯಾಚರಣೆ ನಡೆಸಲಾಗುತ್ತದೆ. ಭಾರಿ ಕಚೇರಿಗಳ ಹಾಗೂ ದೊಡ್ಡ ವ್ಯಕ್ತಿಗಳ ಪ್ರಕರಣಗಳಲ್ಲಿ ರಾಜ್ಯ ಲೋಕಾಯುಕ್ತರ ಅನುಮತಿ ಪಡೆಯಲಾಗುತ್ತದೆ.

**ಬಂದೀಖಾನೆಗಳು ಮತ್ತು ಲಾಕಪ್ಪುಗಳು**

ಜಿಲ್ಲಾ ಕೇಂದ್ರವಾದ ಕೋಲಾರದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಬಂದೀಖಾನೆ ೧೮೫೮ರಲ್ಲಿ ಜಿಲ್ಲಾ ಉಪ ಬಂದೀಖಾನೆಯಾಗಿ ಪ್ರಾರಂಭಗೊಂಡಿತು. ೧೮೫೬ರ ನಂತರ ಬಂದೀಖಾನೆಯ ಖೈದಿಗಳ ಕಲ್ಯಾಣಕ್ಕಾಗಿ ಹಲವಾರು ಸುಧಾರಣೆಗಳನ್ನು ತರಲಾಯಿತು. ಬೆಂಗಳೂರಿನಲ್ಲಿ ೧೮೬೩ರಲ್ಲಿ ಕೇಂದ್ರ ಕಾರಾಗೃಹ ಸ್ಥಾಪನೆಯಾದ ನಂತರ ಇಡೀ ರಾಜ್ಯದ ಬಂದೀಖಾನೆಗಳಿಗೆ ಅನ್ವಯಿಸುವಂತೆ ಏಕರೂಪ ಕಾನೂನು ಜಾರಿಯಾಯಿತು. ೧೮೮೧ರಲ್ಲಿ ಕೋಲಾರದಲ್ಲಿ ಬಂದೀಖಾನೆ ಜಿಲ್ಲೆಯ ಆರೋಗ್ಯಾಧಿಕಾರಿಯ ಆಡಳಿತಕ್ಕೆ ಒಳಪಟ್ಟಿತು. ೧೮೮೩ರಲ್ಲಿ ಇದರ ಹೆಸರನ್ನು ಜಿಲ್ಲಾ ಲಾಕಪ್ ಎಂದು ಬದಲಾಯಿಸಲಾಯಿತು. ಕಾಲಕ್ರಮದಲ್ಲಿ ಅವಶ್ಯಕತೆಗನುಸಾರ ತಾಲೂಕು ಹಾಗೂ ಉಪತಾಲೂಕು ಕೇಂದ್ರಗಳಲ್ಲಿ ಲಾಕಪ್ಪುಗಳನ್ನು ಪ್ರಾರಂಭಿಸಲಾಯಿತು. ೧೯೧೩ರ ಡಿಸೆಂಬರ್‌ನಲ್ಲಿ ಕೆ.ಜಿ.ಎಫ್.ನ ಗಣಿಪ್ರದೇಶಕ್ಕಾಗಿಯೇ ಒಂದು 'ವಿಶೇಷ ಉಪಕಾರಾಗೃಹ'ವನ್ನು ಸ್ಥಾಪಿಸಲಾಯಿತು. ಆಗ ಇದು ಆ ಪ್ರದೇಶದ ವಿಶೇಷ ಮಾಜಿಸ್ಟ್ರೇಟರ ಅಧೀನಕ್ಕೊಳಪಟ್ಟಿತ್ತು. ಜಿಲ್ಲಾ ಹಾಗೂ ತಾಲೂಕು ಲಾಕಪ್ಪುಗಳ ಉತ್ತಮ ಆಡಳಿತಕ್ಕಾಗಿ ೧೯೭೨ರಲ್ಲಿ ನೂತನ ಕಾನೂನು ಜಾರಿಯಾಗಿ, ಜ್ಯುಡಿಷಿಯಲ್ ಮುನ್ಸೀಫರು, ಅಮಲ್ದಾರರು ಅಥವಾ ಡೆಪ್ಯುಟಿ ಅಮಲ್ದಾರರಿಗೆ ತಂತಮ್ಮ ಪ್ರದೇಶದ ಲಾಕಪ್ಪುಗಳ ಮೇಲ್ವಿಚಾರಣೆಯನ್ನು ವಹಿಸಲಾಯಿತು.

ಮಾರ್ಚ್ ೨೦೦೩ರಲ್ಲಿದ್ದಂತೆ ಜಿಲ್ಲೆಯಲ್ಲಿ ಈ ಕೆಳಕಂಡ ಕಾರಾಗೃಹಗಳು ಕಾರ್ಯನಿರ್ವಹಿಸುತ್ತಿದ್ದವು ;

೧ ಜಿಲ್ಲಾ ಕೇಂದ್ರ ಉಪಕಾರಾಗೃಹ, ಕೋಲಾರ

೨ ವಿಶೇಷ ಉಪಕಾರಾಗೃಹ, ಕೆ.ಜಿ.ಎಫ್

೩ ಉಪಕಾರಾಗೃಹ, ಚಿಕ್ಕಬಳ್ಳಾಪುರ

ಇವುಗಳಲ್ಲಿ ಮೊದಲನೆಯದು ಬೆಂಗಳೂರು ವಿಭಾಗಕ್ಕೆ ಒಳಪಟ್ಟಿದ್ದು, (ತುಮಕೂರು, ಮಂಡ್ಯ, ಚಿತ್ರದುರ್ಗ ಸೇರಿದಂತೆ) ಒಬ್ಬ ಜೈಲು ಆಡಳಿತಾಧಿಕಾರಿಯ ಅಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಎರಡನೆಯ ಕಾರಾಗೃಹ ಕೆ.ಜಿ.ಎಫ್.ನಗರಕ್ಕೆ ಸೀಮಿತಗೊಂಡಿದ್ದು, ಒಬ್ಬ ಛೀಫ್ ವಾರ್ಡನ್ನರ ಅಧಿಕಾರಕ್ಕೊಳಪಡುತ್ತದೆ. ರಾಜ್ಯದಲ್ಲಿರುವ ಎರಡೇ ವಿಶೇಷ ಉಪಕಾರಾಗೃಹಗಳಲ್ಲಿ ಇದು ಒಂದಾಗಿದ್ದು, ಮತ್ತೊಂದು ದಾವಣಗೆರೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಚಿಕ್ಕಬಳ್ಳಾಪುರದ ಮೂರನೇ ಉಪಕಾರಾಗೃಹಕ್ಕೆ ಶಿಡ್ಲಘಟ್ಟ, ಗುಡಿಬಂಡೆ, ಬಾಗೇಪಲ್ಲಿ ಹಾಗೂ ಗೌರಿಬಿದನೂರು ಪ್ರದೇಶಗಳು ಸೇರುತ್ತವೆ. ಇದಕ್ಕೂ ಒಬ್ಬ ಚೀಫ್ ವಾರ್ಡನರೇ ಮುಖ್ಯಸ್ಥರಾಗಿರುತ್ತಾರೆ. ಪ್ರಸ್ತುತ ಚಿಂತಾಮಣಿಯಲ್ಲಿ ಒಂದು ಉಪಕಾರಾಗೃಹ ಪ್ರಾರಂಭಿಸಲು ಯೋಜನೆ ಸಿದ್ಧವಾಗಿದೆ.

ಕೋಲಾರ ಜಿಲ್ಲಾ ಕೇಂದ್ರ ಉಪಕಾರಾಗೃಹದಲ್ಲಿ ಒಟ್ಟು ೧೩ ಸೆಲ್‌ಗಳಿದ್ದು, ಇಲ್ಲಿ ಒಟ್ಟು ೮೨ ಮಂದಿಗೆ (೭೦ ಗಂಡಸರು, ೧೨ ಹೆಂಗಸರು) ವಾಸ್ತವಾವಕಾಶವಿರುತ್ತದೆ. ವಿಚಾರಣಾಧೀನ ಖೈದಿಗಳ ಸಂಖ್ಯೆ ಅವರವರ ಶಿಕ್ಷೆಗನುಗುಣವಾಗಿ ದಿನಂಪ್ರತಿ ಬದಲಾವಣೆಯಾಗುತ್ತದೆ. ಅವರಲ್ಲಿ ಕೆಲವರು ನ್ಯಾಯಾಲಯದಲ್ಲಿ ಬಿಡುಗಡೆಯಾದರೆ, ಮತ್ತೆ ಕೆಲವರು ಬೆಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲ್ಪಡುತ್ತಾರೆ. ಇಲ್ಲಿನ ವಿಚಾರಣಾಧೀನ ಖೈದಿಗಳಿಗೆ ಪ್ರತೀದಿನ ಬೆಳಿಗ್ಗೆ ಉಪ್ಪಿಟ್ಟು ೧೮೦ ಗ್ರಾಂ, ಟೀ ೧೦೦ ಮಿ.ಲೀ., ಮಧ್ಯಾಹ್ನ ಮುದ್ದೆ ೪೫೦ ಗ್ರಾಂ, ಅನ್ನ ೨೯೦ ಗ್ರಾಂ, ಬೇಳೆಸಾರು ಹಾಗೂ ಸಂಜೆ ಇದರೊಡನೆ ೧೮೦ ಗ್ರಾಂ ಮಜ್ಜಿಗೆ, ಪ್ರತೀ ಶುಕ್ರವಾರ ೧೧೫ ಗ್ರಾಂ ಕುರಿಮಾಂಸ ನೀಡಲಾಗುತ್ತದೆ. ಜಿಲ್ಲಾ ಕೇಂದ್ರ ಗ್ರಂಥಾಲಯದ ಒಂದು ಶಾಖೆ ಇಲ್ಲಿ ಕಾರ್ಯನಿರತವಾಗಿದ್ದು, ೨,೫೦೦ ವಿವಿಧ ಗ್ರಂಥಗಳನ್ನು ಹೊಂದಿರುತ್ತದೆ. ಪ್ರಮುಖ ಕನ್ನಡ ದಿನಪತ್ರಿಕೆಗಳನ್ನು, ವಾರ ಹಾಗೂ

ಮಾಸಪತ್ರಿಕೆಗಳನ್ನು ಇಲ್ಲಿಗೆ ತರಿಸಲಾಗುತ್ತದೆ. ಇದಲ್ಲದೇ ಖೈದಿಗಳ ಮನರಂಜನೆಗಾಗಿ ಆರು ಕಪ್ಪು ಬಿಳುಪು ಟಿ.ವಿ.ಗಳು, ನಾಲ್ಕು ಕೇರಂ ಬೋರ್ಡುಗಳು ಮತ್ತು ಚೆಸ್ ಬೋರ್ಡುಗಳನ್ನು ನೀಡಲಾಗಿದೆ. ಪ್ರತೀ ಎರಡು ತಿಂಗಳಿಗೊಮ್ಮೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಇಲ್ಲಿನ ಖೈದಿಗಳಿಂದ ನಾಟಕ ಮತ್ತು ಇತರ ವಿವಿಧ ಮನರಂಜನಾ ಕಾರ್ಯಕ್ರಮಗಳು ನಡೆಯುತ್ತದೆ. ಹಲವಾರು ಎನ್.ಜಿ.ಓ. ಸಂಸ್ಥೆಗಳು ಇಲ್ಲಿಗೆ ಬಂದು ಯೋಗಶಿಬಿರಗಳನ್ನು ಏರ್ಪಡಿಸುವುದೇ ಅಲ್ಲದೇ ಪ್ರಮುಖ ಹಬ್ಬಗಳಂದು ಸಿಹಿ ತಿಂಡಿ ಹಂಚುತ್ತವೆ. ರಾಷ್ಟ್ರೀಯ ಹಬ್ಬಗಳಂದು ಖೈದಿಗಳಿಗೆ ಮಾಮೂಲು ಊಟದೊಂದಿಗೆ ತಲಾ ಮೂರು ರೂ.ಗಳ ಬೆಲೆಯ ವಿಶೇಷ ಆಹಾರ ನೀಡಲಾಗುವುದು

**ಆಕಸ್ಮಿಕ ಸಾವುಗಳ ವಿವರ**

| ವರ್ಷ | ಆತ್ಮಹತ್ಯೆ | ನೀರಿನಲ್ಲಿ ಮುಳುಗಿ | ಹಾವು ಕಚ್ಚಿದ್ದರಿಂದ | ವಿದ್ಯುತ್ ಶಾಕ್‌ನಿಂದ | ಸಿಡಿಲಿನಿಂದ | ಎತ್ತರದಿಂದ ಬೀಳುವಿಕೆಯಿಂದ | ಸುಟ್ಟ ಗಾಯಗಳಿಂದ | ವಾಹನ ಅಪಘಾತದಿಂದ |
|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ |
| ೧೯೯೩ | ೧೮೩ | ೮೨ | ೧೨ | ೧೨ | – | ೧೩ | ೬೧ | ೨೫೨ |
| ೧೯೯೪ | ೧೭೩ | ೮೦ | ೧೨ | ೧೪ | ೦೩ | ೧೦ | ೭೨ | ೨೮೬ |
| ೧೯೯೫ | ೧೮೫ | ೭೩ | ೧೦ | ೧೨ | ೦೨ | ೦೫ | ೮೧ | ೩೪೧ |
| ೧೯೯೬ | ೧೮೩ | ೭೮ | ೧೫ | ೧೦ | ೦೪ | ೦೬ | ೮೩ | ೩೪೦ |
| ೧೯೯೭ | ೧೮೩ | ೭೪ | ೧೪ | ೦೫ | ೦೨ | ೧೨ | ೮೮ | ೩೫೯ |
| ೧೯೯೮ | ೨೦೯ | ೬೬ | ೧೫ | ೧೨ | – | ೧೨ | ೪೭ | ೩೬೪ |
| ೧೯೯೯ | ೨೩೮ | ೬೩ | ೨೫ | ೧೩ | ೦೨ | ೧೨ | ೧೨೨ | ೩೩೧ |
| ೨೦೦೦ | ೨೩೩ | ೪೯ | ೧೯ | ೦೮ | – | ೦೮ | ೧೧೭ | ೩೦೨ |
| ೨೦೦೧ | ೨೨೨ | ೫೩ | ೨೦ | ೧೫ | – | ೦೮ | ೯೬ | ೩೩೩ |
| ೨೦೦೨ | ೨೫೦ | ೭೬ | ೩೨ | ೦೭ | ೦೩ | ೦೮ | ೭೪ | ೩೩೪ |

**ಕೋಲಾರ ಎಸ್.ಪಿ. ವೃತ್ತದಡಿ ನಡೆದ ಗಲಭೆಗಳ ವಿವರ:**

**ಕೋಮುಗಲಭೆಗಳು:** ಕೋಲಾರ ನಗರದ ಅಮ್ಮವಾರಿಪೇಟೆಯಲ್ಲಿ ಆಂಜನೇಯನ ದೇವಾಲಯ ಕಟ್ಟುವ ವಿಚಾರದಲ್ಲಿ ಹಿಂದೂ ಮುಸ್ಲಿಮರ ನಡುವೆ ೮.೧.೧೯೭೯ರಂದು ಗಲಭೆಗಳೇರ್ಪಟ್ಟು, ಪೊಲೀಸರ ಮಧ್ಯಪ್ರವೇಶದಿಂದ ಪರಿಸ್ಥಿತಿ ಶಾಂತವಾಗಿ, ಪ್ರಕರಣ ದಾಖಲಾಗಿರುತ್ತದೆ. ೧೧.೧೨.೧೯೮೮ರಂದು ನಡೆದ ಹೆಡ್ಗೆವಾರ್ ಜನ್ಮ ಶತಾಬ್ದಿ ಆಚರಣಾ ಸಂಬಂಧ ನಡೆದ ಮೆರವಣಿಗೆ ಕಾಲದಲ್ಲಿ ನಡೆದ ಹಿಂದೂ–ಮುಸ್ಲಿಂ ಕೋಮುಗಲಭೆಯಲ್ಲಿ ದೊಂಬಿ, ಲೂಟಿಗಳಾಗಿ, ಕೋಲಾರದ ಗಲ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಈ ಸಂಬಂಧ ೩೦ ದಿನಗಳ ನಿಷೇಧಾಜ್ಞೆ ಜಾರಿಯಾಗಿದ್ದಿತು.

ಮುಳಬಾಗಿಲಿನಲ್ಲಿ ೧೯೯೦ರಲ್ಲಿ ನಡೆದ ರಾಮಜ್ಯೋತಿ ಮೆರವಣಿಗೆ ಸಂದರ್ಭದಲ್ಲಿ ನಡೆದ ಈದ್‌ಮಿಲಾದ್‌ಗಾಗಿ ಮುಸ್ಲಿಮರು ವಿದ್ಯುದ್ದೀಪಾಲಂಕಾರ ಮಾಡಿದ್ದಾಗ ನಡೆದ ಕೋಮುಗಲಭೆಯಲ್ಲಿ ದೊಂಬಿ, ಲೂಟಿ ನಡೆದು, ಐದು ಜನ ಮೃತರಾದಾಗ ನಿಷೇಧಾಜ್ಞೆ ಜಾರಿಗೊಳಿಸಿ, ಪರಿಸ್ಥಿತಿ ಹತೋಟಿಗೆ ತರಲಾಯಿತು. ಇದೇ ಸಂಬಂಧ ಕೋಲಾರದ ಗ್ರಾಮಾಂತರ ವೃತ್ತದಡಿ ನಡೆದ ಗಲಭೆಗಳಲ್ಲಿ ೨೦ ಮಂದಿ ಗಾಯಗೊಂಡರು.

೬.೧೨.೧೯೯೨ರಲ್ಲಿ ಅಯೋಧ್ಯೆಯಲ್ಲಿ ನಡೆದ ಕರಸೇವೆಯ ಹಿನ್ನೆಲೆಯಲ್ಲಿ ಕೋಲಾರ ನಗರದಲ್ಲಿ ನಡೆದ ಕೋಮುಗಲಭೆಯನ್ನು ಹತೋಟಿಗೆ ತರಲು ನಿಷೇಧಾಜ್ಞೆ ಜಾರಿಗೊಳಿಸಲಾಯಿತು.

ಮಾಲೂರಿನಲ್ಲಿ ೬.೫.೧೯೮೩ರಂದು ಹಿಂದೂ ಹುಡುಗಿಯೊಬ್ಬಳನ್ನು ಮುಸ್ಲಿಂ ಯುವಕ ಕೀಟಲೆ ಮಾಡಿದ ಹಿನ್ನೆಲೆಯಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತರು ಪ್ರತಿಭಟಿಸಿ ವಾಹನ, ಅಂಗಡಿ, ಮುಂಗಟ್ಟುಗಳಿಗೆ ಬೆಂಕಿ ಇಟ್ಟು ಲೂಟಿ ಮಾಡಿದಾಗ, ನಿಷೇಧಾಜ್ಞೆ ವಿಧಿಸಲಾಯಿತು.

೧೩.೫.೧೯೮೩ರಂದು ಮಾಲೂರಿನ ಪಟಾಲಮ್ಮ ದೇವಾಲಯದ ಬಳಿ ೫೦೦ ಮಂದಿಯ ಗುಂಪು ಮಾರಕಾಸ್ತ್ರಗಳೊಂದಿಗೆ ಪೊಲೀಸರ ಮೇಲೆ ದೌರ್ಜನ್ಯ ಮಾಡಿ, ಅವರ ವಾಹನಕ್ಕೆ ಬೆಂಕಿ ಹಚ್ಚಿ ದೊಂಬಿ ಮಾಡಿದಾಗ, ಪೊಲೀಸರು ಹಾರಿಸಿದ ಗುಂಡಿಗೆ ಆರು ಜನ ಮೃತಪಟ್ಟು ೧೬ ಮಂದಿಗೆ ಗಾಯಿಗಳಾಗಿರುತ್ತದೆ. ಅಲ್ಲದೆ ಒಬ್ಬ ಡಿಎಸ್‌ಪಿ ಮತ್ತು ೫೦ ಮಂದಿ ಪೊಲೀಸರಿಗೂ ಗಾಯಗಳಾಗಿರುತ್ತದೆ.

ಶಿಡ್ಲಘಟ್ಟದಲ್ಲಿ ನಡೆದ ಕೋಮು ಗಲಭೆ ಹಿನ್ನೆಲೆಯಲ್ಲಿ ೧೮.೫.೧೯೮೮ರಂದು ವೇಮಗಲ್ ಬಳಿಯ ಕ್ಯಾಲನೂರು ಸರಹದ್ದಿನಲ್ಲಿ ಸುತ್ತಮುತ್ತಲ ಹಳ್ಳಿಗಳ ಗ್ರಾಮಸ್ಥರು ಗುಂಪುಗೂಡಿ, ಲೂಟಿ, ಬೆಂಕಿ ಹಚ್ಚುವಿಕೆಯಲ್ಲಿ ತೊಡಗಿದ್ದುದರಿಂದ, ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಒಬ್ಬ ಗ್ರಾಮಸ್ಥ ಮೃತಪಟ್ಟು, ಹಲವಾರು ಪೊಲೀಸರು ಗಾಯಗೊಂಡಿರುತ್ತಾರೆ.

**ರೈತರ ಚಳವಳಿಗಳು:** ಹಾಲಿನ ದರ ಹೆಚ್ಚಳಕ್ಕಾಗಿ ಒತ್ತಾಯಿಸಿ ಸುಮಾರು ೩,೦೦೦ ಮಂದಿ ಕೋಲಾರ ತಾಲೂಕು ಹಾಲು ಉತ್ಪಾದಕ ಸಂಘದ ಸದಸ್ಯರು ಹಾಗೂ ರೈತರು ೬.೬.೧೯೯೪ರಂದು ಜಿಲ್ಲಾಧಿಕಾರಿಯವರ ಕಛೇರಿಗೆ ಮೆರವಣಿಗೆ ಹೊರಟಾಗ ನಡೆದ ಗಲಭೆ ವಿಕೋಪಕ್ಕೆ ತಿರುಗಿದಾಗ ಪೊಲೀಸರು ಗೋಲಿಬಾರ್ ನಡೆಸಿ ಪರಿಸ್ಥಿತಿ ನಿಯಂತ್ರಿಸಿರುತ್ತಾರೆ.

ಇದೇ ಗುಂಪುಗಳ ಸುಮಾರು ೮,೦೦೦ ಮಂದಿ ಪುನಃ ೨೦.೧೨.೧೯೯೯ರಂದು ಇದೇ ಅಹವಾಲನ್ನು ಜಿಲ್ಲಾಧಿಕಾರಿಗಳಿಗೆ ಒಪ್ಪಿಸಿ ವಾಪಸಾಗುತ್ತಿದ್ದಾಗ, ಬೆಳಗಾನಹಳ್ಳಿ ಡೈರಿಯ ಬಳಿ ಗಲಾಟೆಯಾಗಿ, ಲಘು ಲಾಠಿಪ್ರಹಾರದ ನಂತರ ಚದುರಿರುತ್ತಾರೆ.

ತಮ್ಮ ಬೆಳೆಗೆ ಸರಿಯಾದ ಬೆಲೆ ಸಿಗಲಿಲ್ಲವೆಂಬ ಕಾರಣಕ್ಕೆ ೩.೭.೨೦೦೨ರಂದು ಕೋಲಾರ ತಾಲೂಕಿನ ರೈತರು ರಸ್ತೆ ತಡೆ ನಡೆಸಿದಾಗ, ಪೊಲೀಸರು ಮಧ್ಯೆ ಪ್ರವೇಶಿಸಿ ಶಾಂತಿ, ಸೌಹಾರ್ದ ಕಾಪಾಡಿರುತ್ತಾರೆ.

**ವಿದ್ಯಾರ್ಥಿ ಚಳವಳಿಗಳು:** ೧೫.೩.೧೯೭೮ ಹಾಗೂ ೨೧.೧.೧೯೮೧ ರಂದು ಕೆಎಸ್‌ಆರ್‌ಟಿಸಿ ಬಸ್ ಸೌಕರ್ಯ ಒತ್ತಾಯಿಸಿದ ಕಾಲೇಜು ವಿದ್ಯಾರ್ಥಿಗಳು ಕೋಲಾರದಲ್ಲಿ ಮೆರವಣಿಗೆ ವಡೆಸಿದಾಗ ಹಲವು ಬಸ್ಸುಗಳಿಗೆ ಜಖಂ ಮಾಡಿ, ದೊಂಬಿ ಮಾಡಿದ ಘಟನೆ ದಾಖಲಾಗಿರುತ್ತದೆ. ಈ ಸಂಬಂಧ ಯಾವುದೇ ನಷ್ಟವಾಗಲೀ ಪ್ರಾಣಹಾನಿಯಾಗಲೀ ಸಂಭವಿಸಿರುವುದಿಲ್ಲ.

೧೫.೮.೧೯೯೫ರ ಸ್ವಾತಂತ್ರ್ಯ ದಿನಾಚರಣೆಯಂದು ಕೋಲಾರದ ಅಂಬೇಡ್ಕರ್ ಹಾಸ್ಟಲಿನ ವಿದ್ಯಾರ್ಥಿಗಳು ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ಹಾಸ್ಟೆಲ್ ಕಟ್ಟಡದ ಮೇಲೆ ಕಪ್ಪು ಬಾವುಟ ಹಾರಿಸಿದ ಪ್ರಕರಣದ ಬಗ್ಗೆ ಕೇಸು ದಾಖಲಾಗಿರುತ್ತದೆ.

೨೩.೧೧.೧೯೯೫ರಂದು ಇದೇ ಹಾಸ್ಟಲಿನ ಸುಮಾರು ೩೦೦ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ಅಂಬೇಡ್ಕರ್ ಪ್ರತಿಮೆಗೆ ಮದ್ಯದ ಅಭಿಷೇಕ ಮಾಡಿದುದನ್ನು ಪ್ರತಿಭಟಿಸಿ ಬಸ್ ನಿಲ್ದಾಣ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗಲಾಟೆ ಮಾಡೆದ ಪ್ರಕರಣದ ಕೇಸು ದಾಖಲಾಗಿರುತ್ತದೆ.

**ಸಾಮಾಜಿಕ ಗಲಭೆಗಳು:** ೧೭.೧೧.೧೯೯೫ರಂದು ಮೈಸೂರಿನಲ್ಲಿ ಅಂಬೇಡ್ಕರ್ ಪ್ರತಿಮೆ ಭಂಗ ಮಾಡಿದ ಹಿನ್ನೆಲೆಯಲ್ಲಿ ಕೋಲಾರದಲ್ಲಿ ಡಿಎಸ್‌ಎಸ್ ಕಾರ್ಯಕರ್ತರು ಮೆರವಣಿಗೆ ಮಾಡಿ ಗಲಾಟೆ ಮಾಡಿದ ಪ್ರಕರಣದ ಕೇಸು ದಾಖಲಾಗಿರುತ್ತದೆ.

೨೭.೮.೧೯೯೮ ರಂದು ಕೋಲಾರದ ನಾಗರಿಕ ಹಿತರಕ್ಷಣಾ ವೇದಿಕೆ ದಲಿತ ಸಂಘಗಳ ವಿರುದ್ಧ ನಡೆಸಿದ ಮೆರವಣಿಗೆ ಹಾಗೂ ಪ್ರತಿಭಟನೆ ಗಲಾಟೆಯಾಗಿ ಮಾರ್ಪಟ್ಟು ಈ ಬಗ್ಗೆ ಕೇಸು ದಾಖಲಾಗಿರುತ್ತದೆ.

೨೬.೯.೨೦೦೨ ರಂದು ಗುಜರಾತಿನ ಸ್ವಾಮಿನಾರಾಯಣ ದೇವಸ್ಥಾನದ ನರಮೇಧದ ಬಗ್ಗೆ ವಿಶ್ವ ಹಿಂದೂ ಪರಿಷತ್‌ನವರು ಕೋಲಾರ ಬಂದ್ ಮಾಡಿಸಿ ಮೆರವಣಿಗೆ ನಡೆಸಿದಾಗ ಗಲಾಟೆಗಳು ನಡೆದು, ಕೇಸು ದಾಖಲಾದರೆ, ೨೧.೮.೨೦೦೪ರಂದು, ಆಂಧ್ರದಿಂದ ಕರ್ನಾಟಕಕ್ಕೆ ಹಾಲು ಸರಬರಾಜಾದ ವಿಷಯದಲ್ಲಿ ರಸ್ತೆ ತಡೆ ಮಾಡಿ, ಹಾಲನ್ನು ಚೆಲ್ಲಿದ ಬಗ್ಗೆಯೂ ಕೇಸು ದಾಖಲಾಗಿರುತ್ತದೆ.

**ಮತೀಯ ಗಲಭೆಗಳು:–**

**ಚಿಂತಾಮಣಿ ಉಪ ವಿಭಾಗ:**

೧) ದಿನಾಂಕ ೬.೬.೮೭ರಂದು ಚಿಂತಾಮಣಿ ನಗರದಲ್ಲಿ ಪ್ರಯಾಣ ದರ ಕೊಡುವ ವಿಚಾರದಲ್ಲಿ ಆಟೋರಿಕ್ಷಾ ಚಾಲಕನಿಗೂ ಮತ್ತು ಮುಸ್ಲಿಂ ಪ್ರಯಾಣಿಕನಿಗೂ ಗಲಾಟೆಗಳಾಗಿ, ಇದು ಮುಂದೆ ಕೋಮುಗಲಭೆಯಾಗಿ ಮುಸ್ಲಿಂ ಜನಾಂಗದವರ ಮನೆಗಳಿಗೆ ಬೆಂಕಿ ಬಿದ್ದು, ಇದರ ಬಗ್ಗೆ ಕೇಸುಗಳು ದಾಖಲಾಗಿರುತ್ತದೆ.

೨) ದಿನಾಂಕ: ೯.೧.೮೯ರಂದು ಚಿಂತಾಮಣಿ ನಗರದ ಚೌರರೆಡ್ಡಿಪಾಳ್ಯದಲ್ಲಿ ಕ್ಷುಲ್ಲಕ ಕಾರಣಕ್ಕೆ ಹಿಂದೂ ಒಬ್ಬರು ಮುಸ್ಲಿಮನನ್ನು ಅಟ್ಟಿಕೊಂಡು ಹೋಗಿ ಟಿಪ್ಪುನಗರದಲ್ಲಿ ಹೊಡೆದಿದ್ದರಿಂದ, ಟಿಪ್ಪುನಗರದ ಕೆಲವು ಮುಸ್ಲಿಂ ಕಿಡಿಗೇಡಿಗಳು ಗುಂಪುಕಟ್ಟಿಕೊಂಡು ಮೇಲ್ಕಂಡ ಹಾಸ್ಟಲ್‌ಗೆ ನುಗ್ಗಿ ಗಲಾಟೆ ಮಾಡಿದ್ದು, ಈ ಬಗ್ಗೆ ಕೇಸು ದಾಖಲಾಗಿರುತ್ತದೆ.

೩) ದಿನಾಂಕ: ೧೩.೧.೧೯೯೦ರಂದು ಚಿಂತಾಮಣಿ ನಗರದ ನಗರ್ತರಪೇಟೆಯಲ್ಲಿ ಮುನಿಸಿಪಾಲಿಟಿಗೆ ಸಂಬಂಧಿಸಿದ ಸಾರ್ವಜನಿಕ ನೀರಿನ ನಲ್ಲಿಯ (ಕೊಳಾಯಿ) ವಿಚಾರದಲ್ಲಿ ಹಿಂದೂ ಮಹಿಳೆಯವರಿಗೆ ಮತ್ತು ಮುಸ್ಲಿಂ ಮಹಿಳೆಯವರಿಗೆ ಗಲಾಟೆಗಳಾಗಿದ್ದು, ಎರಡೂ ಕಡೆಯವರಿಂದ ದೂರುಗಳನ್ನು ಪಡೆದಿದ್ದು, ಮೊಕದ್ದಮೆಗಳು ದಾಖಲಾಗಿರುತ್ತವೆ.

೪) ದಿನಾಂಕ: ೧೪.೨.೧೯೮೦ರಂದು ಶಿಡ್ಲಘಟ್ಟದ ಅಶೋಕ ರಸ್ತೆಯ ನಗರೇಶ್ವರ ದೇವಸ್ಥಾನದಲ್ಲಿ ಹರಿಕಥೆ ನಡೆಯುತ್ತಿರುವಾಗ ಶಿಡ್ಲಘಟ್ಟದ ಮುಸ್ಲಿಂ ಜನಾಂಗದವರು ಹರಿಕಥೆ ವಿಷಯದಲ್ಲಿ ಕೆಟ್ಟ ಮಾತುಗಳಿಂದ ಬೈದದ್ದರಿಂದ ಮತೀಯ ಗಲಭೆಗಳಾಗಿ ಕೇಸುಗಳು ದಾಖಲಾಗಿರುತ್ತವೆ.

೫) ದಿನಾಂಕ: ೨೬.೫.೧೯೮೭ರಂದು ಶಿಡ್ಲಘಟ್ಟದ ಕುರುಬರಪೇಟೆಯಲ್ಲಿ ಮಾರಮ್ಮ ದೇವಿ ಪ್ರತಿಷ್ಠಾಪನೆ ಮಾಡುವ ಸಮಯದಲ್ಲಿ ಮುಸ್ಲಿಂ ಜನಾಂಗದವರು ಉತ್ಸವದ ಜನರ ಮೇಲೆ ಕೀಟಲೆ ಮಾಡಿ ತಮಟೆ ಹೊಡೆಯಬಾರದೆಂದು ತಮಟೆಯನ್ನು ಕಿತ್ತುಕೊಂಡು ಹೊಡೆದು ಹಾಕಿ, ಪೊಲೀಸರ ಮೇಲೆ ಕಲ್ಲು ತೂರಾಟ ಮಾಡಿ ಹಿಂಸಾಚಾರದಲ್ಲಿ ತೊಡಗಿದ್ದು, ಇದನ್ನು ತಡೆಗಟ್ಟಲು ಪೊಲೀಸರು ಲಾಠಿ ಪ್ರಹಾರ ಮತ್ತು ಗಾಳಿಯಲ್ಲಿ ಗುಂಡಿ ಹಾರಿಸಿ ಗುಂಪನ್ನು ಚದುರಿಸಿರುತ್ತಾರೆ. ಇದರ ಬಗ್ಗೆ ಕೇಸುಗಳು ದಾಖಲಾಗಿರುತ್ತವೆ.

೬) ದಿನಾಂಕ ೪.೬.೮೮ ಮತ್ತು ೫.೬.೮೮ ರಂದು ಶಿಡ್ಲಘಟ್ಟದಲ್ಲಿ ಯಲ್ಲಮ್ಮ ದೇವಿಯ ಕರಗ ಮಹೋತ್ಸವದ ಮೆರವಣಿಗೆ ಜಾಮಿಯಾ ಮಸೀದಿ ಮುಂಭಾಗ ಬಂದಾಗ, ಕೆಲವು ಮುಸ್ಲಿಂ ಕಿಡಿಗೇಡಿಗಳು ಕರಗದ ಮೇಲೆ ಕಲ್ಲು, ಚಪ್ಪಲಿ, ಎಸೆದಿದ್ದು, ಈ ಸಂಬಂಧ ಮತೀಯ ಗಲಭೆಗಳಾಗಿ, ಇಬ್ಬರು ಮೃತಪಟ್ಟಿದ್ದು, ನಿಷೇದಾಜ್ಞೆ ಜಾರಿಯಾಗಿ, ಇದರ ಬಗ್ಗೆ ಶಿಡ್ಲಘಟ್ಟ ಠಾಣೆಯಲ್ಲಿ ಕೇಸುಗಳು ದಾಖಲಾಗಿರುತ್ತವೆ.

೭) ದಿನಾಂಕ ೧೨.೧೨.೮೮ರಂದು ಕೋಲಾರದಲ್ಲಿ ಮತೀಯ ಗಲಭೆಗಳು ವಡೆದ ಹಿನ್ನೆಲೆಯಲ್ಲಿ ಶಿಡ್ಲಘಟ್ಟದಲ್ಲಿ ಮುಸ್ಲಿಂ ಒಬ್ಬನು ವಾಸವಿ ರಸ್ತೆಯಲ್ಲಿ ಒಬ್ಬ ಹಿಂದೂ ವ್ಯಕ್ತಿಗೆ ಹೊಡೆದ ಕಾರಣ ಆ ವ್ಯಕ್ತಿಯು ಸತ್ತು ಹೋಗಿದ್ದು, ಮತೀಯ ಗಲಭೆಗಳಾಗಿ ಪ್ರಕರಣ ದಾಖಲಾಗಿರುತ್ತವೆ.

**ಮುಳಬಾಗಿಲು ಉಪ ವಿಭಾಗ:**

೧) ೧೯೯೦ನೇ ಸಾಲಿನಲ್ಲಿ ಮುಳಬಾಗಿಲಿನಲ್ಲಿ ರಾಮಜನ್ಮಭೂಮಿ ಮತ್ತು ಬಾಬರಿ ಮಸೀದಿ ವಿವಾದ ಸಂದರ್ಭದಲ್ಲಿ ಕೋಮು ಗಲಭೆಗಳಾಗಿ ಹಿಂದೂ ಮತ್ತು ಮುಸ್ಲಿಂ ಎರಡು ಜನಾಂಗದವರ ಮೇಲೆ ೨೨ ಕೇಸುಗಳು ದಾಖಲಾಗಿರುತ್ತವೆ.

೨) ೧೯೯೨ನೇ ಸಾಲಿನಲ್ಲಿ ಶ್ರೀನಿವಾಸಪುರದ ಆಜಾದ್ ರಸ್ತೆಯಲ್ಲಿ ಮುಸ್ಲಿಂ ವೈದ್ಯರಲ್ಲಿ ಚಿಕಿತ್ಸೆಗಾಗಿ ಹಿಂದೂ ಮಗುವೊಂದನ್ನು ಕರೆದುಕೊಂಡು ಹೋಗಿದ್ದು, ಸರಿಯಾಗಿ ಚಿಕಿತ್ಸೆ ಕೊಡದೆ ಮಗು ಸತ್ತಿದ್ದು, ಈ ಸಂಬಂಧ ಕೋಮುಗಲಭೆಗಳಾಗಿ ಇಬ್ಬರು ಸತ್ತಿರುತ್ತಾರೆ.

**ರೈತ ಚಳುವಳಿಗಳು:–**

ದಿನಾಂಕ ೧೨.೮.೨೦೦೪ರಂದು ಚಿಕ್ಕಬಳ್ಳಾಪುರ ತಾಲ್ಲೂಕು ರೈತರು ಮತ್ತು ಸಾರ್ವಜನಿಕರು ಚಿಕ್ಕಬಳ್ಳಾಪುರಕ್ಕೆ ಕುಡಿಯುವ ನೀರು ಸರಬರಾಜು ಆಗುತ್ತಿರುವ ಜಕ್ಕಲಮಡುಗು ಜಲಾಶಯದ ನೀರನ್ನು ದೊಡ್ಡಬಳ್ಳಾಪುರಕ್ಕೆ ಸರಬರಾಜು ಮಾಡಬೇಕೆಂದು ಸರ್ಕಾರ ತೀರ್ಮಾನಿಸಿರುವುದರ ವಿರುದ್ಧ ಪ್ರತಿಭಟಿಸಿ, ಚಳವಳಿ ಮಾಡಿ, ನಂತರ ಪೊಲೀಸರ ಮಧ್ಯಪ್ರವೇಶದಿಂದ ಶಾಂತರೀತಿಯಿಂದ ಹೋಗಿರುತ್ತಾರೆ.

## ಕೆ.ಜಿ.ಎಫ್.ಪೊಲೀಸ್ ವೃತ್ತ

ಬಂಗಾರಪೇಟೆ ತಾಲೂಕಿನ ಕಂದಾಯ ವಲಯಕ್ಕೆ ಒಳಪಡುವ ಕೆ.ಜಿ.ಎಫ್ ಪ್ರದೇಶ 'ಸಿ' ದರ್ಜೆಯ ನಗರವೆಂದು ಪರಿಗಣಿಸಲ್ಪಟ್ಟಿದೆ. ಇಲ್ಲಿ ಏಪ್ರಿಲ್ ೨೦೦೩ರಲ್ಲಿ ಇದ್ದಂತೆ ಒಬ್ಬ ಡಿವೈಎಸ್ಪಿ ಆಡಳಿತದಡಿ ಒಂದು ಉಪವಿಭಾಗ, ನಾಲ್ಕು ವೃತ್ತ ನಿರೀಕ್ಷಕರಡಿ ನಾಲ್ಕು ವೃತ್ತ ಕಚೇರಿಗಳು, ಒಂಬತ್ತು ಸಬ್–ಇನ್ಸ್‌ಪೆಕ್ಟರಡಿ ಒಂಬತ್ತು ಪೊಲೀಸ್ ಠಾಣೆಗಳು ಹಾಗೂ ಒಬ್ಬ ಹೆಡ್‌ಕಾನ್ಸ್‌ಟೇಬಲ್ ಯಡಿ ಒಂದು ಪೊಲೀಸ್ ಹೊರಠಾಣೆ (ಔಟ್‌ಪೋಸ್ಟ್)ಗಳು ಹಾಗೂ ೧೪–೦೫–೦೨ರಿಂದ ಒಂದು ಮಹಿಳಾ ಸಹಾಯವಾಣಿ ಸಹ ಕಾರ್ಯನಿರ್ವಹಿಸುತ್ತಿವೆ. ಬಂಗಾರಪೇಟೆಯಲ್ಲಿ ಒಂದು ರೈಲ್ವೆ ಪೊಲೀಸ್ ಠಾಣೆ ಕಾರ್ಯನಿರ್ವಹಿಸುತ್ತಿದೆ.

೨೦೦೪–೦೫ರಲ್ಲಿ ಕೆ.ಜಿ.ಎಫ್. ಸಿವಿಲ್ ಪೊಲೀಸ್ ವಿಭಾಗದಡಿ ಒಬ್ಬ ಎಸ್.ಪಿ., ಒಬ್ಬ ಡಿವೈಎಸ್‌ಪಿ, ಆರು ಮಂದಿ ವೃತ್ತ ನಿರೀಕ್ಷಕರು, ೧೬ ಸಬ್‌ಇನ್ಸ್‌ಪೆಕ್ಟರರು, ೧೮ ಎಎಸ್‌ಐಗಳು, ೧೨೩ ಹೆಚ್.ಸಿ.ಗಳು, ಒಂಬತ್ತು ಮಂದಿ ಮಹಿಳಾ ಹೆಚ್.ಸಿ.ಗಳು, ೨೬೫ ಪಿ.ಸಿ.ಗಳು ಮತ್ತು ೨೭ ಡಬ್ಲ್ಯು.ಪಿ.ಸಿ.ಗಳು ಕಾರ್ಯನಿರತರಾಗಿದ್ದರು. ಡಿಎಆರ್ ವಿಭಾಗದಲ್ಲಿ ಒಬ್ಬ ರಿಜರ್ವ್ ಪೊಲೀಸ್ ಇನ್ಸ್‌ಪೆಕ್ಟರ್, ಐದು ರಿಜರ್ವ್ ಸಬ್‌ಇನ್ಸ್‌ಪೆಕ್ಟರ್‌ಗಳು, ಎಂಟು ರಿಜರ್ವ್ ಎಎಸ್‌ಐಗಳು, ೪೩ ರಿಜರ್ವ್ ಎಚ್‌ಸಿಗಳು, ೧೯೮ ರಿಜರ್ವ್ ಪಿ.ಸಿ.ಗಳು ಕಾರ್ಯನಿರ್ವಹಿಸಿದರೆ, ವೈರ್‌ಲೆಸ್ ವಿಭಾಗದಡಿ ಒಬ್ಬ ಇನ್ಸ್‌ಪೆಕ್ಟರ್, ಮೂರು ಸಬ್‌ಇನ್ಸ್‌ಪೆಕ್ಟರ್‌ಗಳು, ಐದು ಎಎಸ್‌ಪಿಗಳು, ೧೦ ಎಚ್‌ಸಿಗಳು ಮತ್ತು ೦೪ ಪಿಸಿಗಳು ಕಾರ್ಯನಿರ್ವಹಿಸುತ್ತಿದ್ದರು.

೧೯೯೩ ರಿಂದ ೨೦೦೨ರವರೆಗಿನ ಹತ್ತು ವರ್ಷಗಳಲ್ಲಿ ಜಿಲ್ಲೆಯಲ್ಲಿ ನಡೆದ ಅಪರಾಧಗಳ ಹಾಗೂ ಸಜೆಯ ವಿವರಗಳನ್ನು ಈ ಮುಂದಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

| ವರ್ಷ | ಕೊಲೆ | ದರೋಡೆ | ಸುಲಿಗೆ | ಕಳ್ಳತನ | ಅತ್ಯಾಚಾರ | ಅನೈತಿಕ ಚಟುವಟಿಕೆ | ಶ್ರೀಗಂಧ ಕಳ್ಳ ಸಾಗಾಣಿಕೆ | ದಂಡ ವಿಧಿಸಲ್ಪಟ್ಟ ಪ್ರಕರಣಗಳು | ಜೈಲಿಗೆ ಕಳುಹಿಸಲ್ಪಟ್ಟ ಪ್ರಕರಣಗಳು |
|---|---|---|---|---|---|---|---|---|---|
| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ |
| ೧೯೯೩ | ೭೪ | ೨೬ | ೧೧ | ೭೫೮ | ೦೬ | ೦೨ | ೦೮ | ೧೯ | ೨೬ |
| ೧೯೯೪ | ೭೧ | ೨೧ | ೨೩ | ೮೮೯ | ೧೫ | ೧೬ | ೦೬ | ೪೪ | ೪೬ |
| ೧೯೯೫ | ೭೩ | ೨೦ | ೨೨ | ೮೨೮ | ೧೨ | ೨೩ | ೦೧ | ೩೩ | ೧೮ |

| ೧ | ೨ | ೩ | ೪ | ೫ | ೬ | ೭ | ೮ | ೯ | ೧೦ |
|---|---|---|---|---|---|---|---|---|---|
| ೧೯೯೬ | ೬೧ | ೧೪ | ೩೨ | ೭೭೮ | ೧೬ | ೧೫ | ೧೨ | ೩೬ | ೧೬ |
| ೧೯೯೭ | ೮೪ | ೨೫ | ೩೭ | ೭೮೧ | ೧೩ | ೧೩ | ೮೪ | ೨೧ | ೨೪ |
| ೧೯೯೮ | ೬೭ | ೧೫ | ೧೪ | ೭೭೨ | ೧೨ | ೧೮ | ೧೩ | ೧೯ | ೧೩ |
| ೧೯೯೯ | ೮೪ | ೧೦ | ೧೭ | ೮೬೨ | ೧೨ | ೧೮ | ೧೭ | ೩೭ | ೧೭ |
| ೨೦೦೦ | ೯೫ | ೧೧ | ೨೩ | ೬೩೫ | ೧೭ | ೧೦ | ೧೩ | ೩೯ | ೨೮ |
| ೨೦೦೧ | ೭೨ | ೧೩ | ೨೩ | ೪೬೪ | ೧೬ | ೧೮ | ೧೧ | ೪೮ | ೨೧ |
| ೨೦೦೨ | ೭೫ | ೧೬ | ೨೯ | ೫೫೨ | ೨೨ | ೧೩ | ೮೪ | ೪೭ | ೧೯ |

**ಕೆಜಿಎಫ್ ಎಸ್.ಪಿ. ವೃತ್ತದಡಿ ನಡೆದ ಗಲಭೆಗಳ ವಿವರ:–**

**ಕಾರ್ಮಿಕ ಗಲಭೆ:** ೧೯೭೩ರ ಡಿಸೆಂಬರ್‌ನಲ್ಲಿ ತಮ್ಮ ಅಗತ್ಯ ಬೇಡಿಕೆಗಳ ಈಡೇರಿಕೆಗಾಗಿ ಬಿಇಎಂಎಲ್ ಕಾರ್ಖಾನೆಯ ಕಾರ್ಮಿಕರು ಕೆಲಸಕ್ಕೆ ಹಾಜರಾಗದೆ ಬೀದಿಗಿಳಿದು, ದೊಂಬಿ ಎಬ್ಬಿಸಿ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಉಂಟು ಮಾಡಿದಾಗ, ಪೊಲೀಸರು ಲಾಠಿಪ್ರಹಾರ ನಡೆಸಿ, ಅಶ್ರುವಾಯು ಸಿಡಿಸಿ, ಗೋಲಿಬಾರ್ ಮಾಡಿದಾಗ, ಒಬ್ಬ ವ್ಯಕ್ತಿ ಮೃತಪಟ್ಟು ನಿಷೇಧಾಜ್ಞೆ ಜಾರಿಯಾಯಿತು.

**ಮತೀಯ ಗಲಭೆಗಳು:** ೧೯೭೮ರಲ್ಲಿ ರಾಬರ್ಟ್‌ಸನ್‌ಪೇಟೆ ಪೊಲೀಸ್ ಠಾಣೆಯ ಸರಹದ್ದಿನಲ್ಲಿ ಪೂಜಾಸ್ಥಳದ ವಿವಾದದಲ್ಲಿ ಮತೀಯ ಗಲಭೆ ಉಂಟಾಗಿ, ಇದರ ನಿಯಂತ್ರಣಕ್ಕಾಗಿ ಪೊಲೀಸರು ಲಾಠಿಪ್ರಹಾರ ಮಾಡಿ, ಅಶ್ರುವಾಯು ಸಿಡಿಸಿದರು. ಅವರ ಕೋರಿಕೆಯಂತೆ ಬಂಗಾರಪೇಟೆ ತಾಲ್ಲೂಕ್ ದಂಡಾಧಿಕಾರಿ ಸಿ.ಆರ್.ಪಿ.ಸಿ. ೧೪೪ರಂತೆ ನಿಷೇಧಾಜ್ಞೆ ಜಾರಿ ಮಾಡಿದ್ದರು.

ಶ್ರೀಲಂಕಾದಲ್ಲಿ ತಮಿಳರಿಗೆ ರಕ್ಷಣೆ ಕೋರಿ ೧೯೮೩ರ ಆಗಸ್ಟ್‌ನಲ್ಲಿ ಕೆಜಿಎಫ್ ಶಾಸಕ ಎಂ. ಭಕ್ತವತ್ಸಲಂ ಅವರ ನೇತೃತ್ವದಲ್ಲಿ ಸುಮಾರು ೨,೦೦೦ ಮಂದಿ ಮೆರವಣಿಗೆ ನಡೆಸಿದರು. ಈ ಮೆರವಣಿಗೆ ವಿಕೋಪಕ್ಕೆ ತಿರುಗಿ ಮೆರವಣಿಗೆದಾರರು ಸಾರ್ವಜನಿಕ ಆಸ್ತಿ ನಷ್ಟ ಮಾಡಿ, ಸರಕಾರಿ ಹಾಗೂ ಇತರೆ ವಾಹನಗಳಿಗೆ ಬೆಂಕಿ ಹಚ್ಚಿದಾಗ, ಪೊಲೀಸರು ಲಾಠಿ, ಅಶ್ರುವಾಯು ಉಪಯೋಗಿಸಿ, ಪರಿಸ್ಥಿತಿ ಹತೋಟಿಗೆ ತಂದರು. ೧೯೯೦ರ ಮೇ ತಿಂಗಳಿನಲ್ಲಿ ವೈಯಕ್ತಿಕ ಕಾರಣಗಳಿಂದ ಬೇತಮಂಗಲ ಪೊಲೀಸ್ ಠಾಣೆ ಸರಹದ್ದಿನಲ್ಲಿ ಎರಡು ಕೋಮುಗಳಿಗೆ ಸೇರಿದ ವ್ಯಕ್ತಿಗಳು ಜಗಳವಾಡಿ ಅದು ಮತೀಯ ಗಲಭೆಗೆ ತಿರುಗಿದಾಗ, ಪೊಲೀಸರ ಮಧ್ಯಪ್ರವೇಶದಿಂದ ಆಗಬಹುದಾದ ಅನಾಹುತ ತಪ್ಪಿ, ಕೇಸು ದಾಖಲಾಗಿ ನ್ಯಾಯಾಲಯದಲ್ಲಿ ಖುಲಾಸೆಯಾಗಿರುತ್ತದೆ. ಇದೇ ತಿಂಗಳಿನಲ್ಲಿ ಇದೇ ಸರಹದ್ದಿನ ದಾಸೇಪಲ್ಲಿ ಗ್ರಾಮದಲ್ಲಿ ಒಂದು ಕೋಮಿಗೆ ಸೇರಿದವರು ಮತ್ತೊಂದು ಕೋಮಿನವರ ಮನೆಗೆ ಬೆಂಕಿ ಹಚ್ಚಿದಾಗ ಬೇತಮಂಗಲದ ಪೊಲೀಸರಿಂದ ಕೇಸು ದಾಖಲಾಗಿ ನ್ಯಾಯಾಲಯದಲ್ಲಿ ಖುಲಾಸೆಗೊಂಡಿರುತ್ತದೆ.

ದಿನಾಂಕ ೩೦.೧೦.೧೯೯೦ರಂದು ಅಯೋಧ್ಯೆಯ ರಾಮ ಜನ್ಮಭೂಮಿ ಮತ್ತು ಬಾಬರಿ ಮಸೀದಿ ವಿಚಾರದಲ್ಲಿ ಬಂಗಾರಪೇಟೆಯಲ್ಲಿ ವಿ.ಹೆಚ್.ಪಿ. ಮತ್ತು ಬಿ.ಜೆ.ಪಿ. ಯವರು ಪ್ರತಿಭಟನಾ ಮೆರವಣಿಗೆ ನಡೆಸಿದಾಗ, ಪರಿಸ್ಥಿತಿ ವಿಕೋಪಕ್ಕೆ ತಿರುಗಿತು. ಇದರಿಂದ ದುರ್ಘಟನೆಗಳೇನೂ ನಡೆಯದಿದ್ದರೂ ಒಂದು ಕೋಮಿನ ೧೦–೧೨ ಮಂದಿ ಮತ್ತೊಂದು ಕೋಮಿನ ವ್ಯಕ್ತಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದರು.

೧೫.೦೨.೧೯೯೧ರಂದು ಬಂಗಾರಪೇಟೆ ದರ್ಗಾ ಬಳಿ ನಡೆಯುತ್ತಿದ್ದ ಉರುಸ್‌ನಲ್ಲಿ ಇರಾಕ್ ಅಧ್ಯಕ್ಷ ಸದ್ದಾಂ ಹುಸೇನರ ದೊಡ್ಡ ಸ್ತಬ್ಧ ಚಿತ್ರವನ್ನು ಪ್ರದರ್ಶಿಸಿ, ಜಯಘೋಷ ಮಾಡಿದಾಗ, ವಿ.ಹೆಚ್.ಪಿ. ಮತ್ತು ಬಿ.ಜೆ.ಪಿ. ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಈ ಸಂದರ್ಭದಲ್ಲಿ ಪೊಲೀಸರು ಹಿಂದೂ ಹಾಗೂ ಮುಸ್ಲಿಂ ನಾಯಕರೊಡನೆ ಸೌಹಾರ್ದಯುತವಾಗಿ ಚರ್ಚಿಸಿ, ಅನಾಹುತ ತಪ್ಪಿಸಿ, ಉರುಸ್ ಶಾಂತ ರೀತಿಯಲ್ಲಿ ನಡೆಯಲು ಅವಕಾಶ ಮಾಡಿದರು.

ಆದರೆ, ೩.೨.೧೯೯೨ರಂದು ಇಲ್ಲಿ ನಡೆದ ಉರುಸ್‌ನಲ್ಲಿ ಹಿಂದೂ, ಮುಸ್ಲಿಮರು ಅಕ್ಕಪಕ್ಕದಲ್ಲಿಯೇ ಇಟ್ಟಿದ್ದ ಅಂಗಡಿಗಳ ವಿಚಾರದಲ್ಲಿ ಹೊಡೆದಾಟ, ಗಲಭೆಗಳುಂಟಾಯಿತು. ಈ ಸಂಬಂಧ ೬೦–೭೦ ಮಂದಿ ಬಿ.ಜೆ.ಪಿ. ಕಾರ್ಯಕರ್ತರು ನಡೆಸಿದ ಮೆರವಣಿಗೆ ಶಾಂತ ರೀತಿಯಿಂದ ನಡೆಯುವಂತೆ ಪೊಲೀಸರು ಮುಂಜಾಗ್ರತಾ ಕ್ರಮಕೈಗೊಂಡರು.

೮.೧೨.೧೯೯೨ರಲ್ಲಿ ಅಯೋಧ್ಯೆಯ ಬಾಬರಿ ಮಸೀದಿ ಧ್ವಂಸಗೊಳಿಸಿದ ವಿಚಾರದಲ್ಲಿ ಆಂಡರ್‌ಸನ್‌ಪೇಟೆ ಪೊಲೀಸ್ ಠಾಣೆ ಸರಹದ್ದಿನಲ್ಲಿ ಮುಸ್ಲಿಮರು ಪ್ರತಿಭಟಿಸಿ, ಪ್ರಚೋದನಕಾರಿ ಭಾಷಣಗಳನ್ನು ಮಾಡಿದಾಗ, ಪೊಲೀಸರು ಸಂಬಂಧಪಟ್ಟವರನ್ನು ದಸ್ತಗಿರಿ ಮಾಡಿ, ಕೇಸು ದಾಖಲಿಸಿಕೊಂಡರು.

೨.೮.೧೯೯೮ರ ರಾತ್ರಿ ಬಂಗಾರಪೇಟೆ ಡಾ. ಅಂಬೇಡ್ಕರ್ ಉದ್ಯಾನದಲ್ಲಿ ದುಷ್ಕರ್ಮಿಗಳು ಅಂಬೇಡ್ಕರ್ ಪ್ರತಿಮೆಯ ಬಲಗೈ ಮುರಿದುಹಾಕಿದಾಗ ದಲಿತ ಸಂಘ ಸಂಸ್ಥೆಗಳು ತಂತಮ್ಮ ಗುಂಪುಗಳೊಡನೆ ಮಾರಕಾಸ್ತ್ರಗಳೊಡನೆ ಬಂದು, ಸಾರ್ವಜನಿಕರ ಮೇಲೆ ಹಲ್ಲೆ ಮಾಡಿ, ಆಸ್ಪತ್ರೆ, ಔಷಧಿ ಅಂಗಡಿಗಳನ್ನು ಧ್ವಂಸ ಮಾಡಿದರು. ಈ ಸಂದರ್ಭದಲ್ಲಿ ಪೊಲೀಸರು ಹಾಗೂ ಜಿಲ್ಲಾಧಿಕಾರಿ ಆಗಮಿಸಿ, ತಪ್ಪಿತಸ್ಥರನ್ನು ಬಂಧಿಸಿ, ಪರಿಸ್ಥಿತಿಯನ್ನು ಹತೋಟಿಗೆ ತಂದರು.

೨೮.೨.೨೦೦೧ರಂದು ಬೇತಮಂಗಲದಲ್ಲಿ ಖಾಸಗಿ ಜಗಳವೊಂದು ಸಾರ್ವಜನಿಕ ಆಯಾಮ ಪಡೆದು ಮತೀಯ ಗಲಭೆಯಾಗಿ ಪರಿವರ್ತನೆಯಾದಾಗ, ಸುಮಾರು ೧೦೦ ಮಂದಿ ಬೇತಮಂಗಲದ ಪೊಲೀಸ್ ಠಾಣೆ ಹತ್ತಿರ ಗುಂಪುಗೂಡಿ ಗಲಾಟೆ ಮಾಡಿದಾಗ ಪೊಲೀಸರು ಪರಿಸ್ಥಿತಿ ನಿಯಂತ್ರಣಕ್ಕಾಗಿ ಲಾಠಿಪ್ರಹಾರ ಮಾಡಿ ಅಶ್ರುವಾಯು ಪ್ರಯೋಗಿಸಿದರು.

೪.೩.೨೦೦೩ರಂದು ಗೋದ್ರಾ ಗಲಭೆಯ ಪ್ರತಿಕ್ರಿಯೆಯಾಗಿ ಬಂಗಾರಪೇಟೆಯಲ್ಲಿ ವಿ.ಹೆಚ್.ಪಿ., ಬಿ.ಜೆ.ಪಿ. ಮತ್ತು ಭಜರಂಗದಳದ ಸುಮಾರು ೬೦,೦೦೦ ಮಂದಿ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸುತ್ತಾ ಮುಸ್ಲಿಮರ ಬೀದಿಗಳಲ್ಲಿ ಬಂದಾಗ, ಮತೀಯ ಗಲಾಭೆಗಳಾಗಿ, ಪೊಲೀಸರು ಮಧ್ಯ ಪ್ರವೇಶ ಮಾಡಿದಾಗ, ಅವರ ಮೇಲೆ ಕಲ್ಲು, ಚಪ್ಪಲಿಗಳು, ತೂರಾಟವಾಯಿತು. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ನಷ್ಟ ಉಂಟುಮಾಡಿ ಬೆಂಕಿ ಹಚ್ಚುತ್ತಿದ್ದವರನ್ನು ಪಡೆಯಲು ಪೊಲೀಸರು ಲಾಠಿ ಪ್ರಹಾರ, ಅಶ್ರುವಾಯ ಬಳಸಿ, ೧೫೨ ಮಂದಿಯನ್ನು ದಸ್ತಗಿರಿ ಮಾಡಿರುತ್ತಾರೆ.

## ಗೃಹರಕ್ಷಕ ದಳ

ನಿಷ್ಕಾಮ ಸಮಾಜಸೇವೆಯನ್ನು ಧ್ಯೇಯವನ್ನಾಗಿಯೂ, ಅದನ್ನೇ ಮುಖ್ಯ ಗುರಿಯನ್ನಾಗಿಸಿಕೊಂಡ ಸ್ವಯಂ ಸೇವಾ ಸಂಸ್ಥೆಯಾದ ಗೃಹರಕ್ಷಕ ದಳ ಎರಡನೇ ಮಹಾಯುದ್ಧದ ಕಾಲದಲ್ಲಿ ಸ್ಥಾಪನೆಗೊಂಡು ಕಾರ್ಯಾರಂಭ ಮಾಡಿತು. ರಾಜ್ಯದಲ್ಲಿ ೧೯೬೨ರಲ್ಲಿ ಪ್ರಾಕೃತಿಕ ಮತ್ತು ಮಾನವ ನಿರ್ಮಿತ ವಿಪತ್ತುಗಳು ಸಂಭವಿಸಿದಾಗ ಹಾಗೂ ಕಾನೂನು ಮತ್ತು ಶಿಸ್ತು ಪಾಲನೆಯಲ್ಲಿ ಹಾಗೂ ಸಾರ್ವಜನಿಕರ ಪ್ರಾಣ ಆಸ್ತಿಪಾಸ್ತಿಗಳ ರಕ್ಷಣೆಯಲ್ಲಿ ಈ ದಳದ ಗೃಹರಕ್ಷಕರು ಪೊಲಿಸರೊಂದಿಗೆ ಪೂರಕವಾಗಿ ಹಾಗೂ ಸರಿಸಾಟಿಯಾಗಿ ಕಾರ್ಯನಿರ್ವಹಿಸುತ್ತಾರೆ.

ಕರ್ನಾಟಕ ಸರ್ಕಾರವು ೧೮ನೇ ಡಿಸೆಂಬರ್ ೧೯೬೨ರಲ್ಲಿ ಕರ್ನಾಟಕ ಗೃಹರಕ್ಷಕ ಕಾಯ್ದೆಯನ್ನು ಹೊರಡಿಸಿ, ಜಿಲ್ಲಾವಾರು ಗೃಹರಕ್ಷಕ ದಳಗಳ ಘಟಕಗಳ ಸ್ಥಾಪನೆಗೆ ಅನುಮತಿ ನೀಡಿತು. ಇದರಂತೆ ಕೋಲಾರ ಜಿಲ್ಲೆಯಲ್ಲಿಯೂ ದಳದ ಚಟುವಟಿಕೆ ಪ್ರಾರಂಭಗೊಂಡಿತು.

ಗೃಹರಕ್ಷಕ ದಳದ ಸ್ವಯಂಸೇವಕರನ್ನು ಜಿಲ್ಲಾ ಸಮಾದೇಷ್ಟರು (ಕಮಾಂಡಂಟ್) ನೇಮಕಾತಿ ಸಮಿತಿಯ ಅನುಮೋದನೆಯೊಂದಿಗೆ ನೇಮಿಸುವರು. ಜಿಲ್ಲಾಧಿಕಾರಿ ಈ ಸಮಿತಿಯ ಅಧ್ಯಕ್ಷರಾಗಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಇದರ ಸದಸ್ಯರಾಗಿರುತ್ತಾರೆ. ಇದಕ್ಕೆ ಸೇರಬಯಸುವ ಅಭ್ಯರ್ಥಿಗಳು ೨೦–೫೦ ವಯೋಮಿತಿಯವರಾಗಿದ್ದು, ಕನಿಷ್ಠ ನಾಲ್ಕನೇ ತರಗತಿ ಉತ್ತೀರ್ಣರಾಗಿರಬೇಕು. ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರಬಾರದು. ಈ ದಳಕ್ಕೆ ಖಾಕಿ ಸಮವಸ್ತ್ರವನ್ನು ಸರ್ಕಾರವೇ ಒದಗಿಸುವುದು.

ಅವಶ್ಯಕತೆಗನುಸಾರವಾಗಿ ತಮ್ಮ ಜಿಲ್ಲಾ ಕೇಂದ್ರದ ಸೂಚನೆಯ ಮೇರೆಗೆ ಕರ್ತವ್ಯಕ್ಕೆ ಹಾಜರಾಗಬೇಕಾದಾಗ ಗೃಹರಕ್ಷಕರಿಗೆ ದಿನಕ್ಕೆ ರೂ.೭೦.೦೦ ರಂತೆ ಕರ್ತವ್ಯ ಭತ್ಯೆ ನೀಡಲಾಗುವುದು. ಇದಲ್ಲದೇ ಹದಿನಾಲ್ಕು ರೂ. ಕವಾಯ್ತು ಭತ್ಯೆ, ೭೦.೦೦ ರೂ. ಶಿಬಿರ ಭತ್ಯೆ, ೩೦.೦೦ ರೂ. ಶಿಬಿರ ಭತ್ಯೆಗಳನ್ನು ಮೂರು ರೂ. ನಂತೆ ದೋಬಿ ಭತ್ಯೆಯನ್ನು ನೀಡಲಾಗುವುದು. ಪ್ರಯಾಣ ಭತ್ಯೆ ಮತ್ತು ವಾಹನ ಭತ್ಯೆಗಳನ್ನು ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ನೀಡಲಾಗುವುದು. ಸರ್ಕಾರಿ ಸೇವೆಯಲ್ಲಿದ್ದು, ಗೃಹರಕ್ಷಕ ಸೇವೆ ಸಲ್ಲಿಸುವವರಿಗೆ ಆದ್ಯತೆಯ ಮೇರೆಗೆ ವಸತಿಗೃಹಗಳನ್ನು, ವಿಶೇಷ ಸಾಂದರ್ಭಿಕ ರಜೆಯನ್ನು ಮಂಜೂರು ಮಾಡಲಾಗುವುದು. ಕರ್ತವ್ಯ ನಿರತ ಸಮವಸ್ತ್ರಧಾರಿ ಗೃಹರಕ್ಷಕರಿಗೆ ಸರ್ಕಾರಿ ವಾಹನಗಳಲ್ಲಿ ಉಚಿತ ಪ್ರಯಾಣ ಸೌಲಭ್ಯ ಕಲ್ಪಿಸಲಾಗಿದೆ. ಎಲ್ಲಾ ತರಬೇತಿ ಶಿಬಿರಗಳಲ್ಲಿ ಭಾಗವಹಿಸುವ ಗೃಹರಕ್ಷಕರಿಗೆ ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ ಆದ್ಯತೆ ನೀಡಲಾಗುತ್ತದೆ. ಜಿಲ್ಲಾ ಹಾಗೂ ರಾಜ್ಯ ಮಟ್ಟಗಳಲ್ಲಿ ಇವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಗೃಹರಕ್ಷಕ ನಿಧಿಯನ್ನು ಸ್ಥಾಪಿಸಲಾಗಿದೆ. ಪ್ರತೀ ವರ್ಷ ಡಿಸೆಂಬರ್ ಆರನೇ ತಾರೀಕು ಗೃಹರಕ್ಷಕ ದಿನಾಚರಣೆಯನ್ನು ಆಚರಿಸಲಾಗುವುದು.

ಕೋಲಾರ ಜಿಲ್ಲಾ ಗೃಹರಕ್ಷಕ ದಳದ ಒಟ್ಟು ಸಂಖ್ಯೆ ೬೫೦. ಇದರಲ್ಲಿ ಗೌರವ ಕಮಾಂಡಂಟ್ ಒಬ್ಬರು, ನೇಮಕಗೊಂಡ ಡೆಪ್ಯುಟಿ ಕಮಾಂಡಂಟ್ ಒಬ್ಬರು, ಸೀನಿಯರ್ ಇನ್‌ಸ್ಟ್ರಕ್ಟರ್ ಒಬ್ಬರು, ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್ ಇಬ್ಬರು, ಸೇರಿರುತ್ತಾರೆ. ಜಿಲ್ಲೆಯ ಪ್ರತೀ ತಾಲೂಕಿನಲ್ಲಿಯೂ ದಳ ತನ್ನ ಘಟಕಗಳನ್ನು ಹೊಂದಿದ್ದು, ಪ್ರತೀ ದಳ ಒಬ್ಬ ಇನ್‌ಸ್ಟ್ರಕ್ಟರುರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ.